# ಮೈಸೂರು ವಿಶ್ವವಿದ್ಯಾನಿಲಯ

**ಮೈಸೂರು ವಿಶ್ವವಿದ್ಯಾನಿಲಯ ಕ್ರಾಫರ್ಡ್ ಭವನದ ಸಿಂಡಿಕೇಟ್ ಸಭಾಂಗಣದಲ್ಲಿ ದಿನಾಂಕ: 14-05-2025ರ ಬುಧವಾರ ಪೂರ್ವಾಹ್ನ 11-00 ಗಂಟೆಗೆ ನಡೆದ "ಸಿಂಡಿಕೇಟಿನ ಮೂರನೇ ಸಾಮಾನ್ಯ ಸಭೆ"ಯ ನಡಾವಳಿ.**

**ಉಪಸ್ಥಿತರು:**

1. ಪ್ರೊ. ಎನ್.ಕೆ.ಲೋಕನಾಥ್, ಕುಲಪತಿಗಳು – ಅಧ್ಯಕ್ಷರು
2. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ ಇವರ ಪರವಾಗಿ ಪ್ರೊ. ಬಿ.ಚಂದ್ರಶೇಖರ್, ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಮೈಸೂರು. – ಸದಸ್ಯರು
3. ಪ್ರೊ. ಎಸ್.ಜೆ.ಮಂಜುನಾಥ್ – ಸದಸ್ಯರು
4. ಡಾ. ಟಿ.ಆರ್.ಚಂದ್ರಶೇಖರ್ – ಸದಸ್ಯರು
5. ಶ್ರೀ ಕೆ.ಗೋಕುಲ್ ಗೋವರ್ಧನ್ – ಸದಸ್ಯರು
6. ಡಾ. ಎಂ.ಪುಷ್ಪವತಿ – ಸದಸ್ಯರು
7. ಡಾ. ಬಿ.ಆರ್.ಜಯಕುಮಾರಿ – ಸದಸ್ಯರು
8. ಡಾ. ಮಹೇಶ್ ಟಿ.ಬಿ – ಸದಸ್ಯರು
9. ಡಾ. ಹೆಚ್.ಎಂ.ಮಹೇಶ – ಸದಸ್ಯರು
10. ಶ್ರೀ ಮಹದೇಶು – ಸದಸ್ಯರು
11. ಶ್ರೀ ನಾಗರಾಜು ಸಿ – ಸದಸ್ಯರು
12. ಡಾ. ಬಸವರಾಜು ಸಿ – ಸದಸ್ಯರು
13. ಪ್ರೊ. ಶಬ್ಬೀರ್ ಮೊಹಮದ್ ಮುಸ್ತಫ – ಸದಸ್ಯರು
14. ಡಾ. ಶಿಲ್ಪ ಜೆ – ಸದಸ್ಯರು
15. ಡಾ. ನಟರಾಜು ಹೆಚ್ ಎಸ್ – ಸದಸ್ಯರು
16. ಡಾ. ಎನ್.ನಾಗರಾಜ, ಕುಲಸಚಿವರು (ಪರೀಕ್ಷಾಂಗ) ಮತ್ತು ಹಣಕಾಸು ಅಧಿಕಾರಿಗಳು (ಪ್ರಭಾರ) – ಸದಸ್ಯರು
17. ಶ್ರೀಮತಿ ಸವಿತಾ ಎಂ ಕೆ, ಕುಲಸಚಿವರು – ಸದಸ್ಯ ಕಾರ್ಯದರ್ಶಿ

**ಅನುಪಸ್ಥಿತರು**

1. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು ಇವರ ಪರವಾಗಿ ಶ್ರೀ ಶೇಖರ್, ಜಂಟಿ ನಿರ್ದೇಶಕರು, ಬೆಂಗಳೂರು
2. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
3. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
4. ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.

ಮೊದಲಿಗೆ ಕುಲಸಚಿವರು ಸಭಾಧ್ಯಕ್ಷರಾದ ಮಾನ್ಯ ಕುಲಪತಿಗಳು ಹಾಗೂ ಗೌರವಾನ್ವಿತ ಎಲ್ಲಾ ಸಿಂಡಿಕೇಟ್ ಸದಸ್ಯರುಗಳನ್ನು ಸಭೆಗೆ ಹೃತ್ಪೂರ್ವಕವಾಗಿ ಸ್ವಾಗತಿಸಿದರು.

ಮಾನ್ಯ ಕುಲಪತಿಯವರ ಅನುಮತಿ ಮೇರೆಗೆ ಸದಸ್ಯ ಕಾರ್ಯದರ್ಶಿಯಾಗಿರುವ ಕುಲಸಚಿವರು ಈ ಕೆಳಕಂಡಂತೆ ಕಾರ್ಯಸೂಚಿಗಳನ್ನು ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿದರು.

| ವಿಷಯ ಸಂಖ್ಯೆ | ವಿಷಯ ಸಂಕ್ಷಿಪ್ತವಾಗಿ |
| --- | --- |
| **ದಿನಾಂಕ: 04-04-2025 ರಂದು ಜರುಗಿದ "ಸಿಂಡಿಕೇಟಿನ ಎರಡನೇ ಸಾಮಾನ್ಯ ಸಭೆ"ಯ ನಡಾವಳಿಯನ್ನು ದೃಢೀಕರಿಸುವ ಬಗ್ಗೆ.** | |
| ಡಾ. ಟಿ.ಆರ್.ಚಂದ್ರಶೇಖರ್ ಅವರು ಮಾತನಾಡಿ, ದಿನಾಂಕ: 04-04-2025 ರಂದು ಜರುಗಿದ ಸಿಂಡಿಕೇಟ್ ಸಭೆಯಲ್ಲಿ ಹಣಕಾಸು ಅಧಿಕಾರಿಗಳು ಬಜೆಟ್ ಅನ್ನು ಮಂಡಿಸಿದರು. ಆ ಸಂದರ್ಭದಲ್ಲಿ | |

ಹಣಕಾಸು ಅಧಿಕಾರಿಗಳು ಮಾತನಾಡಿ ಕರಡು ಬಜೆಟ್ ಅನ್ನು ಮಂಡಿಸುತ್ತಿದ್ದೇವೆ. ಇದರಲ್ಲಿ ತಿದ್ದುಪಡಿ ಅಥವಾ ಏನೇ ಸಲಹೆಯಿದ್ದರೂ ನೀಡಬಹುದು ಎಂದು ತಿಳಿಸಿರುತ್ತಾರೆ. ಆ ಸಮಯದಲ್ಲಿ ನಾನು ಪ್ರಮುಖವಾದ ಆಕ್ಷೇಪಣೆ ಮಾಡಿದೆ. ಹಣಕಾಸಿಗೆ ಸಂಬಂಧಪಟ್ಟಂತೆ 18 ಖಾತೆಗಳಿದ್ದು, ಅದರಲ್ಲಿ ಒಂದು RUSA ಖಾತೆಯಾಗಿದೆ. ಸರ್ಕಾರದ ಆದೇಶದಂತೆ 'O' ಖಾತೆ ಮಾಡಿ, ಆ ಅನುದಾನವನ್ನು ವಾಪಸ್ಸು ಕಳುಹಿಸಲಾಗಿದೆ ಎಂದು ತಿಳಿಸಿದ್ದೀರಿ. ಎರಡನೆಯದಾಗಿ ಹಿಂದಿನ ಮೂರು ಆರ್ಥಿಕ ವರ್ಷಗಳ RUSA ಖಾತೆಯ ಸಂಬಂಧ ಸಭೆಯಲ್ಲಿ ಪ್ರಸ್ತಾಪ ಮಾಡಲಾಗಿತ್ತು ಮತ್ತು 2024-25ನೇ ಸಾಲಿನಲ್ಲಿ RUSA ಬಜೆಟ್‌ನ್ನು ಮಂಡಿಸಲಾಗಿತ್ತು. ಅದರಲ್ಲಿ 11 ಕೋಟಿ ರೂ.ಗಳನ್ನು ಪ್ರಸ್ತಾಪಿಸಲಾಗಿತ್ತು. ಆ 11 ಕೋಟಿ ರೂ.ಗಳು ಮುಂದಿನ ವರ್ಷಕ್ಕೆ carry forward ಆಗುತ್ತದೆ. ಎಷ್ಟೇ ತಿಂಗಳುಗಳು ಇರಬಹುದು. ತದನಂತರ ಸರ್ಕಾರದ ಆದೇಶದಂತೆ 'O' ಮಾಡಲಾಗಿತ್ತು. ಆದರೆ, RUSA ಗೆ ಅನುದಾನ ಬಿಡುಗಡೆಯಾದಾಗ, 11 ಕೋಟಿ ರೂ.ಗಳಲ್ಲಿ ಎಷ್ಟು ಖರ್ಚಾಗಿದೆ, ಎಷ್ಟು ವಾಪಸ್ಸು ಕಳುಹಿಸಲಾಗಿದೆ ಮತ್ತು ಅದರಲ್ಲಿ ಎಷ್ಟು ಬಡ್ಡಿ ಉತ್ಪತ್ತಿಯಾಗಿದೆ, ಆ ಹಣವನ್ನು ಬಳಕೆ ಮಾಡುವುದಕ್ಕೆ ಅವಕಾಶವಿದೆಯೇ, ಸರ್ಕಾರಕ್ಕೆ ವಾಪಸ್ಸು ಮಾಡಬೇಕಾಗಿದೆಯಾ ಅಂತ ಎಲ್ಲಾ ಮಾಹಿತಿಗಳನ್ನು ಬಜೆಟ್‌ಲ್ಲಿ ಪ್ರಸ್ತಾಪ ಮಾಡಿದ್ದ ನಂತರ 'O' ಮಾಡಿದ್ದರೆ, ಮುಂದಿನ ಆರ್ಥಿಕ ವರ್ಷದಲ್ಲಿ ಪ್ರಶ್ನಿಸಲಾಗುವುದಿಲ್ಲ. RUSA ಗೆ ಬಿಡುಗಡೆಯಾದ ಅನುದಾನವು ಒಂದು ತಿಂಗಳಾಗಲೀ ಅಥವಾ ಒಂದು ದಿನವಾಗಲೀ ಇದ್ದರೂ ಬಜೆಟ್ ಮುಖಾಂತರ ಸಿಂಡಿಕೇಟ್ ಸಭೆಯ ಗಮನಕ್ಕೆ ತರಬೇಕು. ಆದರೆ ಬಜೆಟ್‌ನಲ್ಲಿ ಅಪೂರ್ಣ ಮಾಹಿತಿಯಾಗಿರುವುದರಿಂದ, ನಾನು ತಿಳಿಸಿದ್ದ ಎಲ್ಲಾ ಮಾಹಿತಿಗಳನ್ನು ಸೇರ್ಪಡೆಗೊಳಿಸಿ ಬಜೆಟ್‌ನ ಪ್ರತಿಯನ್ನು ನೀಡಿ ಅಂಗೀಕರಿಸಬಹುದೆಂದು ಮಾನ್ಯ ಕುಲಸಚಿವರಿಗೂ ಪತ್ರ ಬರೆಯಲಾಗಿದೆ. ಈ ಸಂಬಂಧ ಇದುವರೆವಿಗೂ ಉತ್ತರಿಸಿರುವುದಿಲ್ಲ. ಇದರ ಬಗ್ಗೆ ಮಾಹಿತಿಯನ್ನು ನೀಡಬೇಕೆಂದು ತಿಳಿಸಿದರು.

ಕುಲಪತಿಗಳು ಮಾತನಾಡಿ, Rashtriya Uchchatar Shiksha Abhiyan (RUSA) ಅನುದಾನವಾಗಿದ್ದು, ಈ ಅನುದಾನವನ್ನು ಉಪಯೋಗಿಸಿಕೊಳ್ಳುವುದಕ್ಕೆ ಅದರದೇ ಆದ ಮಾನ್ಯತೆಗಳಿವೆ.ಕಳೆದ ಆರ್ಥಿಕ ವರ್ಷದಿಂದ RUSA ಖಾತೆ 'O' ಆಗಿದೆ. RUSA ಅನುದಾನವನ್ನು ನಿರ್ಧಿಷ್ಟವಾಗಿ ಅಂದರೆ ಟೆಂಡರ್, ಕಾಮಗಾರಿ ಅಥವಾ ಯಾವುದಕ್ಕೆ ಉಪಯೋಗಿಸಬೇಕೆಂದು ನಿರ್ದೇಶಿಸುವುದಿಲ್ಲ. ಅನುಮೋದನೆ, ಆದೇಶ, Inspection, ಆಡಿಟ್ ಪ್ರತಿಯೊಂದು ಅವರ ವತಿಯಿಂದಲೇ ನಿರ್ವಹಿಸಲ್ಪಡುವ ಹಿನ್ನೆಲೆಯಲ್ಲಿ ವಿಶ್ವವಿದ್ಯಾನಿಲಯದ ಖಾತೆಗೆ ಅನುದಾನ ಬಿಡುಗಡೆಯಾಗುತ್ತಿಲ್ಲ. ಪ್ರಸ್ತುತ ಖಾತೆಯಲ್ಲಿ 'O' ಆಗಿದೆ. ಅನುದಾನ ಬಿಡುಗಡೆಯಾದಲ್ಲಿ, ಸಿಂಡಿಕೇಟ್ ಸಭೆಯ ಗಮನಕ್ಕೆ ತರಲಾಗುವುದು ಎಂದು ತಿಳಿಸಿದರು.

ಕುಲಸಚಿವರು (ಪರೀಕ್ಷಾಂಗ) ಅವರು ಮಾತನಾಡಿ, ದಿನಾಂಕ: 31-03-2024 ರಂದು RUSA ಖಾತೆಯಲ್ಲಿ 'O' ಆಗಿರುತ್ತದೆಂದು ಸಭೆಯ ಗಮನಕ್ಕೆ ತಂದರು.

ಶ್ರೀ ಮಹದೇಶು ಅವರು ಮಾತನಾಡಿ, ಒಂದೂವರೆ ವರ್ಷದಿಂದ ಹಲವಾರು ಅತ್ಯಂತ ಪ್ರಮುಖವಾದ ವಿಷಯಗಳನ್ನು ಅಂದರೆ ವಿಶ್ವವಿದ್ಯಾನಿಲಯದ ಅಭಿವೃದ್ಧಿಗೆ ಪೂರಕವಾದ ವಿಷಯಗಳನ್ನು ಸಿಂಡಿಕೇಟ್‌ನ ಕಾರ್ಯಸೂಚಿಯಲ್ಲಿ ಮಂಡಿಸಬೇಕೆಂದು ಹಲವಾರು ಪತ್ರಗಳನ್ನು ಬರೆಯಲಾಗಿದ್ದರೂ ಇದುವರೆವಿಗೂ ಒಂದೇ ಒಂದು ವಿಷಯವನ್ನು ಸಿಂಡಿಕೇಟ್‌ಗೆ ಕಾರ್ಯಸೂಚಿಯಾಗಿ ಮಂಡಿಸಿರುವುದಿಲ್ಲ. ಈ ಸಂಬಂಧ ಕಾರಣಗಳನ್ನು ತಿಳಿಸಬೇಕೆಂದರು.

ಕುಲಸಚಿವರು ಮಾತನಾಡಿ, ಸಿಂಡಿಕೇಟ್ ಸದಸ್ಯರುಗಳು ನೀಡಿರುವ ಎಲ್ಲಾ ಪತ್ರಗಳನ್ನು ಗಮನಿಸಲಾಗಿದೆ. ಈಗಾಗಲೇ ಕೆಲವು ಪತ್ರಗಳಿಗೆ ಉತ್ತರಿಸಿ ರವಾನಿಸಲಾಗಿದೆ. ಕೆಲವೊಂದು ಪತ್ರಗಳಲ್ಲಿ ಪರಿಶೀಲಿಸಿ/ಪರಿಷ್ಕರಿಸಿ ಅಥವಾ ಈ ರೀತಿ ಮಾಡಬೇಕು ಎಂದು ಸಲಹೆ ನೀಡಿರುವ ಪತ್ರಗಳಿಗೆ ಪ್ರತ್ಯುತ್ತರ ನೀಡಿರುವುದಿಲ್ಲ. ಆದರೆ ಮಾಹಿತಿ ನೀಡಬೇಕೆಂದು ಕೋರಿರುವ ಪತ್ರಗಳಲ್ಲಿ ಕೆಲವು ಪತ್ರಗಳಿಗೆ ಈಗಾಗಲೇ ಕಛೇರಿಯಲ್ಲಿ ಲಭ್ಯವಿರುವ ಮಾಹಿತಿಗಳನ್ನು ನೀಡಲಾಗಿದೆ ಹಾಗೂ ಸದರಿ ದಿನದಂದು ಮಾಹಿತಿಗಳನ್ನು ನೀಡಲು

ಸಿದ್ಧಪಡಿಸಿಕೊಂಡಿದ್ದೇವೆ. ಸಿಂಡಿಕೇಟ್ ಸಭೆಯಲ್ಲಿ ಮಂಡಿಸಬೇಕೆಂದು ಸಲ್ಲಿಸಿರುವ ಪತ್ರಗಳ ಮಾಹಿತಿಯನ್ನು ತಿಳಿಸಿದ್ದರೆ, ಮಂಡಿಸದೇ ಇರುವುದಕ್ಕೆ ಕಾರಣಗಳನ್ನು ತಿಳಿಸಲಾಗುವುದೆಂದರು.

ಶ್ರೀ ಮಹದೇಶು ಅವರು ಮಾತನಾಡಿ, ನಾನು ಇದುವರೆವಿಗೂ ನೀಡಿರುವ ಎಲ್ಲಾ ಪತ್ರಗಳನ್ನು ಕುಲಸಚಿವರ ಕಛೇರಿಗೆ ಮತ್ತೊಮ್ಮೆ ನೀಡಲಾಗುವುದು. ಪ್ರತಿ ವಿಷಯವು ಸಿಂಡಿಕೇಟ್ ಸಭೆಯಲ್ಲಿ ಚರ್ಚಿಸಬೇಕಾದ ವಿಷಯವಾಗಿರುವುದರಿಂದ, ಸಿಂಡಿಕೇಟ್ ಸಭೆಯಲ್ಲಿ ಕಾರ್ಯಸೂಚಿಯಾಗಿ ಮಂಡಿಸಬೇಕೆಂದು ತಿಳಿಸಲಾಗಿದೆ ಎಂದರು.

ಕುಲಸಚಿವರು ಮಾತನಾಡಿ, ಹಿಂದೆ ಸಲ್ಲಿಸಿರುವ ಪತ್ರಗಳೇನಾದರೂ file it ಆಗಿದ್ದರೆ, ಎಲ್ಲಾ ಪತ್ರಗಳನ್ನು ಮತ್ತೊಮ್ಮೆ ಕಛೇರಿಗೆ ಒದಗಿಸಿದಲ್ಲಿ ಪರಿಶೀಲಿಸಿ ಕ್ರಮವಹಿಸಲಾಗುವುದು.

ಶ್ರೀ ಕೆ.ಗೋಕುಲ್ ಗೋವರ್ಧನ್ ಅವರು ಮಾತನಾಡಿ, ಪುಟ ಸಂಖ್ಯೆ: 26 ರಲ್ಲಿ ಆಸ್ತಿಗಳಿಗೆ ಸಂಬಂಧಪಟ್ಟಂತೆ ಬಾಡಿಗೆ ಮತ್ತು ಅದರ ಸಂರಕ್ಷಣೆ ವಿಚಾರಗಳಿಗೆ ತೆಗೆದುಕೊಂಡಿರುವ ಕ್ರಮವೇನು ಎಂದು ಕೇಳಿದರು.

ಕುಲಸಚಿವರು ಮಾತನಾಡಿ, ಈ ಸಂಬಂಧ ಪೂರ್ಣವಾಗಿ ಮಾಹಿತಿಗಳನ್ನು ಪಡೆದುಕೊಂಡಿದ್ದೇನೆ. ಮೊದಲು ವಿಶ್ವವಿದ್ಯಾನಿಲಯದ ಆಸ್ತಿಗಳ ಪಟ್ಟಿಯನ್ನು ಸಿದ್ಧಪಡಿಸುತ್ತೇವೆ. ಅದರಲ್ಲಿ ವಸತಿಗೃಹಗಳು, ಬಾಡಿಗೆ ನೀಡಿರುವ ಮಾಹಿತಿ, ಬಾಡಿಗೆ ಬಂದಿರುವ ವಿವರ ಮತ್ತು ಟೆಂಡರ್ ಆಹ್ವಾನಿಸಬೇಕಾಗಿರುವ ವಿಷಯಗಳು, ಬಾಕಿ ವಸೂಲಾತಿ ಬಗ್ಗೆ, ಅಷ್ಟು ವಿವರಗಳನ್ನು ಪಡೆಯಲಾಗಿದೆ. ವಸತಿಗೃಹಗಳ ಸಂಬಂಧ ಸದರಿ ಸಭೆಯಲ್ಲಿ ಕಾರ್ಯಸೂಚಿಯಾಗಿ ಮಂಡಿಸಲಾಗಿರುವುದರಿಂದ, ಸುದೀರ್ಘವಾಗಿ ಚರ್ಚಿಸಲಾಗುವುದೆಂದರು.

ಡಾ. ಸಿ.ಬಸವರಾಜು ಅವರು ಮಾತನಾಡಿ, ಹಿಂದಿನ 3-4 ಸಿಂಡಿಕೇಟ್ ಸಭೆಗಳಲ್ಲಿ ಅರ್ಹರಲ್ಲದ ಅಧ್ಯಾಪಕರುಗಳಿಗೆ ಸಿಎಎಸ್ ಅಡಿಯಲ್ಲಿ ಪ್ರಾಧ್ಯಾಪಕರುಗಳ ಪದೋನ್ನತಿಯ ಬಗ್ಗೆ ಒಂದು ಸಮಿತಿ ರಚಿಸಿ, ಸಮಿತಿಯು ವಿಸ್ತೃತವಾಗಿ ಪರಿಶೀಲಿಸಿ ಸಲ್ಲಿಸುವ ವರದಿಯನುಸಾರ ಕ್ರಮ ತೆಗೆದುಕೊಳ್ಳಬೇಕೆಂದು ಪ್ರಸ್ತಾಪಿಸಲಾಗಿದೆ. ಆದರೆ ಇದುವರೆವಿಗೂ ಈ ಸಂಬಂಧ ಸಮಿತಿ ರಚಿಸಿರುವುದಿಲ್ಲ. ಈ ಪ್ರಕರಣದಲ್ಲಿ ಪ್ರೊ. ಜಿ.ಶ್ರೀನಿವಾಸ ಅವರಲ್ಲದೇ ಸುಮಾರು ಮಂದಿ ಈ ರೀತಿ ಪದೋನ್ನತಿಯನ್ನು ಪಡೆದುಕೊಂಡಿದ್ದಾರೆ. ಸಮಿತಿಯು ಕೂಲಂಕಷವಾಗಿ ಪರಿಶೀಲಿಸಿದಾಗ ಮಾತ್ರ ಸತ್ಯಾಸತ್ಯತೆ ಹೊರಬೀಳುತ್ತದೆ ಎಂದರು.

ಕುಲಪತಿಗಳು ಮಾತನಾಡಿ, ಪ್ರಸ್ತುತ ಸಮಿತಿಯಿದೆ. ಪ್ರೊ. ಜಿ.ಶ್ರೀನಿವಾಸ, ಕನ್ನಡ ವಿಭಾಗ ಮತ್ತು ಪ್ರೊ. ದೇವರಾಜೇಗೌಡ ಇವರುಗಳ ಸಂಬಂಧ ವಿಚಾರಣೆಯನ್ನು ನಡೆಸಲಾಗುತ್ತಿದೆ. ಇದರೊಂದಿಗೆ ಲಿಖಿತವಾಗಿ ಕೆಲವರ ನಿದರ್ಶನದೊಂದಿಗೆ ಮಾಹಿತಿ ನೀಡಿದ್ದರೆ ಸೂಕ್ತವೆಂದರು. ನಿವೃತ್ತ ನ್ಯಾಯಾಧೀಶರಿಗೆ ಕಾಲಾವಕಾಶವನ್ನು ನೀಡಲು ಬರುವುದಿಲ್ಲ ಎಂದರು.

ಶ್ರೀ ಕೆ.ಗೋಕುಲ್ ಗೋವರ್ಧನ್, ಶ್ರೀ ಮಹದೇಶು. ಡಾ. ಸಿ.ಬಸವರಾಜು ಮತ್ತು ಡಾ.ನಟರಾಜು.ಹೆಚ್.ಎಸ್ ಅವರುಗಳು ಮಾತನಾಡಿ, ಇದುವರೆವಿಗೂ ವಿಚಾರಣಾ ಸಮಿತಿಗಳನ್ನು ರಚಿಸಲಾಗಿದೆ. ಆದರೆ ಸಮಿತಿಯವರು ವಿಚಾರಣೆ ನಡೆಸಿ ಸಲ್ಲಿಸಿರುವ ವರದಿಯು ಒಂದು ಇರುವುದಿಲ್ಲ. ಆದ್ದರಿಂದ ತುರ್ತಾಗಿ ರಚಿಸಲಾಗಿರುವ ವಿಚಾರಣಾ ಸಮಿತಿಯು ವರದಿ ಸಲ್ಲಿಸಲು ಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸಿದರು.

ಕುಲಪತಿಗಳು ಮಾತನಾಡಿ, ವಿಚಾರಣಾ ಸಮಿತಿಗೆ ನಿವೃತ್ತ ನ್ಯಾಯಾಧೀಶರನ್ನು ನೇಮಕ ಮಾಡಲಾಗಿದೆ. ಆದರೆ ನಿವೃತ್ತ ನ್ಯಾಯಾಧೀಶರಿಗೆ ಕಾಲಾವಕಾಶವನ್ನು ನೀಡಲಾಗುವುದಿಲ್ಲ. ಸಮಿತಿಯು ಸಂಬಂಧಪಟ್ಟ ಕಾಲೇಜು/ವಿಭಾಗ/ಕಛೇರಿಗಳಿಗೆ ಖುದ್ದು ಭೇಟಿ ನೀಡಿ ಮಾಹಿತಿಯನ್ನು ಸಂಗ್ರಹಿಸಬೇಕಾಗುತ್ತದೆ. ಕಾನೂನು ಘಟಕದ ಕಾನೂನು ಸಲಹೆಗಾರರೊಂದಿಗೆ ಚರ್ಚಿಸಬೇಕಾಗುತ್ತದೆ. ಹೀಗೆ ಕೆಲವೊಂದು ನಿಯಮಗಳನ್ನು ವಿಚಾರಣಾ ಸಮಿತಿಯು ಪಾಲಿಸಬೇಕಾಗಿರುವುದರಿಂದ, ಕೆಲವೊಮ್ಮೆ ವಿಚಾರಣೆ ನಡೆಸಿ ವರದಿ ಸಲ್ಲಿಸುವುದು ತಡವಾಗುತ್ತದೆ ಹೊರತು ಯಾವುದೇ ಕಾರಣಕ್ಕೂ ಸ್ಥಗಿತಗೊಳಿಸಲಾಗುವುದಿಲ್ಲ ಎಂದು ಸಭೆಯ ಗಮನಕ್ಕೆ ತಂದರು.

| | |
|---|---|
| ತೀರ್ಮಾನ | ದಿನಾಂಕ: 04-04-2025 ರಂದು ಜರುಗಿದ "ಸಿಂಡಿಕೇಟಿನ ಎರಡನೇ ಸಾಮಾನ್ಯ ಸಭೆ"ಯ ನಡಾವಳಿಯನ್ನು ಸಿಂಡಿಕೇಟ್ ಸಭೆಯು ದೃಢೀಕರಿಸಿತು. |

| | |
|---|---|
| ಸಾಮಾನ್ಯ ಸಭೆ 2025/3.1 | ರೇಷ್ಮೆ ಕೃಷಿ ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರನ್ನು ನೇಮಕ ಮಾಡುವ ಬಗ್ಗೆ |
| ತೀರ್ಮಾನ | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಪ್ರಕರಣ 34(7)ರ ಪ್ರಕಾರ ಪ್ರೊ. ಬಿ.ಸಣ್ಣಪ್ಪ, ಪ್ರಾಧ್ಯಾಪಕರು, ರೇಷ್ಮೆ ಕೃಷಿ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ದಿನಾಂಕ: 07-06-2025 ರಿಂದ ಜಾರಿಗೆ ಬಂದಂತೆ ಎರಡು ವರ್ಷಗಳ ಅವಧಿಗೆ ಅಥವಾ ನಿವೃತ್ತಿಯ ದಿನಾಂಕದವರೆಗೆ ಅಥವಾ ಮುಂದಿನ ಆದೇಶದವರೆಗೆ, ಇವುಗಳಲ್ಲಿ ಯಾವುದು ಮೊದಲು ಘಟಿಸುವುದೋ ಅಲ್ಲಿಯವರೆಗೆ ರೇಷ್ಮೆ ಕೃಷಿ ಅಧ್ಯಯನ ವಿಭಾಗದ ಅಧ್ಯಕ್ಷರನ್ನಾಗಿ ನೇಮಕ ಮಾಡಲು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| ಸಾಮಾನ್ಯ ಸಭೆ 2025/3.2 | 2025ನೇ ಕ್ಯಾಲೆಂಡರ್ ವರ್ಷದಲ್ಲಿ ನಿವೃತ್ತಿ ವಯೋಮಾನ ತಲುಪುವ ಅಧ್ಯಾಪಕೇತರ ನೌಕರರುಗಳಿಗೆ ಸೇವೆಯಿಂದ ನಿವೃತ್ತರಾಗಲು ಅನುಮತಿ ನೀಡುವ ಬಗ್ಗೆ. |
| ತೀರ್ಮಾನ | ಶ್ರೀ ಚಂದ್ರಶೇಖರ, ತೋಟಗಾರರು, ತೋಟಗಾರಿಕಾ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರು 2025ನೇ ಕ್ಯಾಲೆಂಡರ್ ವರ್ಷದಲ್ಲಿ ನಿವೃತ್ತಿ ವಯೋಮಾನ ತಲುಪುವ ದಿನಾಂಕದಂದು ವಿಶ್ವವಿದ್ಯಾನಿಲಯದ ಸೇವೆಯಿಂದ ನಿವೃತ್ತರಾಗಲು ಸಿಂಡಿಕೇಟ್ ಸಭೆಯು ಅನುಮತಿಸಿತು. |
| ಸಾಮಾನ್ಯ ಸಭೆ 2025/3.3 | Universal Institute for Private Training, Kuwait ಸಂಸ್ಥೆಗೆ Specialized Programme ಅಡಿಯಲ್ಲಿ ಮಾನ್ಯತೆ ಪಡೆದ ಕೋರ್ಸ್‌ಗಳಿಗೆ ಅಧ್ಯಯನ ಮಂಡಳಿಯನ್ನು ಪುನರ್‌ರಚಿಸಿರುವ ಬಗ್ಗೆ.-ಅನುಸಮರ್ಥನೆಗಾಗಿ. |
| ತೀರ್ಮಾನ | ಮಾನ್ಯ ಕುಲಪತಿಯವರ ಆದೇಶಾನುಸಾರ ಮತ್ತು ಸಿಂಡಿಕೇಟ್ ಸಭೆಯ ಅನುಮೋದನೆಯನ್ನು ಕಾಯ್ದಿರಿಸಿ, **Specialized Programme** ಅಡಿಯಲ್ಲಿ **Universal Institute for Private Training, Salmiya, AI Moghera Bin shoba Street, Post Box No.6938, Kuwait** ಸಂಸ್ಥೆಗೆ ಮಾನ್ಯತೆ ಪಡೆದಿರುವ **B.com (Accounting & Finance), BBA (Marketing & Human Resource) and B.A (Interior Design)** ಕೋರ್ಸುಗಳಿಗೆ ಅಧ್ಯಯನ ಮಂಡಳಿಯನ್ನು ಪುನರ್‌ರಚಿಸಿ ಅಧಿಸೂಚನೆ ಹೊರಡಿಸಿರುವುದನ್ನು ಸಿಂಡಿಕೇಟ್ ಸಭೆಯು ಸ್ಥಿರೀಕರಿಸಿತು. |
| ಸಾಮಾನ್ಯ ಸಭೆ 2025/3.4 | VTRUST College of Optometry, ಮೈಸೂರು ಸಂಸ್ಥೆಗೆ Specialized Programme ಅಡಿಯಲ್ಲಿ ಮಾನ್ಯತೆ ನೀಡಿರುವ ಕೋರ್ಸ್‌ಗಳಿಗೆ ಅಧ್ಯಯನ ಮಂಡಳಿಯನ್ನು ರಚಿಸಿರುವ ಬಗ್ಗೆ-ಅನುಸಮರ್ಥನೆಗಾಗಿ. |
| ತೀರ್ಮಾನ | ಮಾನ್ಯ ಕುಲಪತಿಯವರ ಆದೇಶಾನುಸಾರ ಮತ್ತು ಸಿಂಡಿಕೇಟ್ ಸಭೆಯ ಅನುಮೋದನೆಯನ್ನು ಕಾಯ್ದಿರಿಸಿ, **Specialized Programme** ಅಡಿಯಲ್ಲಿ **VTRUST College of Optometry, #** ಜೆ.ಪಿ.2, ನ್ಯೂ ಕಾಂತರಾಜ ಅರಸ್ ರಸ್ತೆ, ಕುವೆಂಪುನಗರ, ಮೈಸೂರು ಸಂಸ್ಥೆಗೆ ಮಾನ್ಯತೆ ಪಡೆದಿರುವ **B.Sc. (Optometry Science) and M.Sc. (Optometry Science)** ಕೋರ್ಸುಗಳಿಗೆ ಪಠ್ಯಕ್ರಮ ಮತ್ತು ರೆಗ್ಯುಲೇಷನ್ಸ್‌ಗಳನ್ನು ಸಿದ್ಧಪಡಿಸುವ ಸಂಬಂಧ ಅಧ್ಯಯನ ಮಂಡಳಿಯನ್ನು ರಚಿಸಿ ಅಧಿಸೂಚನೆ ಹೊರಡಿಸಿರುವುದನ್ನು ಸಿಂಡಿಕೇಟ್ ಸಭೆಯು ಸ್ಥಿರೀಕರಿಸಿತು. |

| | |
|---|---|
| ಸಾಮಾನ್ಯ ಸಭೆ 2025/3.5 | ಕುವೆಂಪು ಕಾವ್ಯಾಧ್ಯಯನ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ಆಹ್ವಾನಿಸುವ ಬಗ್ಗೆ. |
| ತೀರ್ಮಾನ | ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ಇಲ್ಲಿ ಸ್ಥಾಪಿತವಾಗಿರುವ ಕುವೆಂಪು ಕಾವ್ಯಾಧ್ಯಯನ ಪೀಠಕ್ಕೆ ಪ್ರೊ. ಕೆ.ಸಿ.ಶಿವಾರೆಡ್ಡಿ, ನಿವೃತ್ತ ಪ್ರಾಧ್ಯಾಪಕರು, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ ಇವರನ್ನು ಒಂದು ವರ್ಷದ ಅವಧಿಗೆ ಮಾಹೆಯಾನ ರೂ.8,000/- ಗಳ ಗೌರವ ಸಂಭಾವನೆಯೊಂದಿಗೆ ಸಂದರ್ಶಕ ಪ್ರಾಧ್ಯಾಪಕರನ್ನಾಗಿ ಆಹ್ವಾನಿಸಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು. |
| ಸಾಮಾನ್ಯ ಸಭೆ 2025/3.6 | Payment of Professional fees in favour of Sri T.P. Rajendra Kumar Sungay, Advocate, Bengaluru towards representing the Contempt of Court Cases (Civil) No. 1122/2024 filed by Smt. Harsha Tejaswini C. against Prof. N.K. Lokanath & Others before the Hon'ble High Court of Karnataka at Bengaluru-reg. |
| ತೀರ್ಮಾನ | **The Syndicate approved the subject.** |
| ಸಾಮಾನ್ಯ ಸಭೆ 2025/3.7 | Department of Studies in Genetics & Genomics, Manasagangotri, Mysuru ಮತ್ತು Anitha Humanitarian Foundation, Bangalore & Mediwave IVF and Fertility Research Hospital, Mysuru ಇವರುಗಳ ನಡುವೆ ಪರಸ್ಪರ (MoU) Triparite Agreement ಅನ್ನು ಮಾಡಿಕೊಳ್ಳಲು ಕೋರಿರುವ ಬಗ್ಗೆ. |
| ತೀರ್ಮಾನ | **Department of Studies in Genetics & Genomics, Manasagangotri, Mysuru ಮತ್ತು Anitha Humanitarian Foundation, Bangalore & Mediwave IVF and Fertility Research Hospital, Mysuru ಸಂಸ್ಥೆಗಳ ನಡುವೆ Genetics & Genomics analysis of 28 gender identities among Indian population ಹಾಗೂ ವಿದ್ಯಾರ್ಥಿಗಳಿಗೆ ತರಬೇತಿ ಮತ್ತು ಉದ್ಯೋಗಾವಕಾಶವನ್ನು ಕಲ್ಪಿಸುವ ಉದ್ದೇಶಕ್ಕಾಗಿ ತ್ರಿಪಕ್ಷೀಯ ಒಪ್ಪಂದ (Triparite Agreement) ಮಾಡಿಕೊಳ್ಳಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.** |
| ಸಾಮಾನ್ಯ ಸಭೆ 2025/3.8 | VTRUST College of Optometry, # J.P.2, ABK ಚಾರಿಟಬಲ್ ಟ್ರಸ್ಟ್, ನ್ಯೂ ಕಾಂತರಾಜ ಅರಸ್ ರಸ್ತೆ, ಕುವೆಂಪುನಗರ, ಮೈಸೂರು ಇವರ ಸಂಸ್ಥೆಯಲ್ಲಿ Specialized Programme ಅಡಿಯಲ್ಲಿ ಹೊಸ ಕೋರ್ಸ್ ಪ್ರಾರಂಭಿಸಲು ಮಾನ್ಯತೆ ನೀಡಿರುವ ಬಗ್ಗೆ- ಅನುಸಮರ್ಥನೆಗಾಗಿ. |
| ತೀರ್ಮಾನ | **ಪರಿವೀಕ್ಷಣಾ ಸಮಿತಿಯ ಶಿಫಾರಸ್ಸಿನನ್ವಯ ಮತ್ತು The University of Mysore Recognition of Certain Institutions for specified studies/specialized and Research Statutes 2008" ಅಧಿನಿಯಮದಡಿ VTRUST College of Optometry, # J.P.2, ABK ಚಾರಿಟಬಲ್ ಟ್ರಸ್ಟ್, ನ್ಯೂ ಕಾಂತರಾಜ ಅರಸ್ ರಸ್ತೆ, ಕುವೆಂಪುನಗರ, ಮೈಸೂರು ಸಂಸ್ಥೆಗೆ Specialized Programme ಅಡಿಯಲ್ಲಿ B.Sc (Optometry Science) and M.Sc (Optometry Science) ಕೋರ್ಸ್‌ಗಳಿಗೆ 40 ವಿದ್ಯಾರ್ಥಿಗಳ ಪ್ರವೇಶಾತಿ ಮಿತಿಯೊಂದಿಗೆ 2025-26ನೇ ಸಾಲಿನಿಂದ ಕೋರ್ಸ್‌ಗಳನ್ನು ಪ್ರಾರಂಭಿಸಲು ಅನುಮತಿಸಿ ಅಧಿಸೂಚನೆ ಹೊರಡಿಸಿರುವುದನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು.** |

| | |
|---|---|
| ಸಾಮಾನ್ಯ ಸಭೆ 2025/3.9 | ದಿವಂಗತ ಶ್ರೀ ಶಿವಲಿಂಗಯ್ಯ, ತೋಟಗಾರರು, ತೋಟಗಾರಿಕಾ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರ ಮಗಳಾದ ಕು. ಅಂಜು ಎಸ್. ಅವರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡುವ ಬಗ್ಗೆ. |
| ತೀರ್ಮಾನ | **ವಿಶ್ವವಿದ್ಯಾನಿಲಯದ ಸೇವೆಯಲ್ಲಿದ್ದಾಗಲೇ ನಿಧನರಾದ ನೌಕರರ ಕುಟುಂಬದವರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡಲು ರಚಿಸಲಾಗಿರುವ ಅಧಿನಿಯಮಗಳನ್ವಯ ಕು. ಅಂಜು ಎಸ್ ಇವರಿಗೆ ಪರಿಚಾರಕರ ಹುದ್ದೆಗೆ ಅನುಕಂಪದ ಆಧಾರದಲ್ಲಿ ನೇಮಕಾತಿ ಮಾಡುವ ಪ್ರಸ್ತಾವನೆಯನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು.** |
| ಸಾಮಾನ್ಯ ಸಭೆ 2025/3.10 | ದಿವಂಗತ ಶ್ರೀ ಎಂ.ಪಿ. ಸಂದೇಶ್, ಪರಿಚಾರಕ, ಯುವರಾಜ ಕಾಲೇಜು ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರ ಪತ್ನಿಯಾದ ಶ್ರೀಮತಿ ಹೆಚ್. ಗಂಗಮ್ಮ ಅವರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡುವ ಬಗ್ಗೆ. |
| ತೀರ್ಮಾನ | **ವಿಶ್ವವಿದ್ಯಾನಿಲಯದ ಸೇವೆಯಲ್ಲಿದ್ದಾಗಲೇ ನಿಧನರಾದ ನೌಕರರ ಕುಟುಂಬದವರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡಲು ರಚಿಸಲಾಗಿರುವ ಅಧಿನಿಯಮಗಳನ್ವಯ ಶ್ರೀಮತಿ ಹೆಚ್.ಗಂಗಮ್ಮ ಇವರಿಗೆ ಪರಿಚಾರಕರ ಹುದ್ದೆಗೆ ಅನುಕಂಪದ ಆಧಾರದಲ್ಲಿ ನೇಮಕಾತಿ ಮಾಡುವ ಪ್ರಸ್ತಾವನೆಯನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು.** |
| ಸಾಮಾನ್ಯ ಸಭೆ 2025/3.11 | ದಿವಂಗತ ಶ್ರೀ ಪ್ರಕಾಶ್ ಬಹದ್ದೂರ್, ಕಾವಲುಗಾರರು, ಆಡಳಿತ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರ ಮಗನಾದ ಶ್ರೀ ಲಕ್ಷ್ಮೀರಾಜ್ ಖಡಗ ಪಿ. ಅವರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡುವ ಬಗ್ಗೆ. |
| ತೀರ್ಮಾನ | **ವಿಶ್ವವಿದ್ಯಾನಿಲಯದ ಸೇವೆಯಲ್ಲಿದ್ದಾಗಲೇ ನಿಧನರಾದ ನೌಕರರ ಕುಟುಂಬದವರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡಲು ರಚಿಸಲಾಗಿರುವ ಅಧಿನಿಯಮಗಳನ್ವಯ ಶ್ರೀ ಲಕ್ಷ್ಮೀರಾಜ್ ಖಡಗ ಪಿ ಇವರಿಗೆ ದ್ವಿತೀಯ ದರ್ಜೆ ಸಹಾಯಕರ ಹುದ್ದೆಗೆ ಅನುಕಂಪದ ಆಧಾರದಲ್ಲಿ ನೇಮಕಾತಿ ಮಾಡುವ ಪ್ರಸ್ತಾವನೆಯನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು.** |
| ಸಾಮಾನ್ಯ ಸಭೆ 2025/3.12 | ಡಾ. ವಿಶ್ವನಾಥ, ನಿವೃತ್ತ ಪ್ರಾಧ್ಯಾಪಕರು, ಕನ್ನಡ ವಿಭಾಗ, ಮಹಾರಾಜ ಕಾಲೇಜು, ಮೈಸೂರು ಇವರ ವಿರುದ್ಧ ಇಲಾಖಾ ವಿಚಾರಣೆಯನ್ನು ಕೈಗೊಳ್ಳುವ ಬಗ್ಗೆ. |
| ತೀರ್ಮಾನ | **ಡಾ. ವಿಶ್ವನಾಥ, ನಿವೃತ್ತ ಪ್ರಾಧ್ಯಾಪಕರು, ಕನ್ನಡ ವಿಭಾಗ, ಮಹಾರಾಜ ಕಾಲೇಜು, ಮೈಸೂರು ಇವರ ವಿರುದ್ಧ ವಿಶ್ವವಿದ್ಯಾನಿಲಯದ ಉದ್ಯೋಗಿಗಳ ಸಿಸಿಎ ಅಧಿನಿಯಮ 1983ರ ಪ್ರಕರಣ 9(5)ರನ್ವಯ ಇಲಾಖಾ ವಿಚಾರಣೆಯನ್ನು ಕೈಗೊಳ್ಳಲು ವಿಚಾರಣಾಧಿಕಾರಿ ಮತ್ತು ಮಂಡನಾಧಿಕಾರಿಯನ್ನು ನೇಮಕ ಮಾಡುವ ಸಂಬಂಧ ವಿವೇಚಾನುಸಾರ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.** |
| ಸಾಮಾನ್ಯ ಸಭೆ 2025/3.13 | ವಿಶ್ವವಿದ್ಯಾನಿಲಯದ ಲಾಂಛನದಲ್ಲಿ ಕನ್ನಡ ಭಾಷೆಯಲ್ಲಿ ವಿಶ್ವವಿದ್ಯಾನಿಲಯ ಹೆಸರನ್ನು ಸೇರಿಸಲು ಸರ್ಕಾರಕ್ಕೆ ಪ್ರಸ್ತಾವನೆಯನ್ನು (ಶಿಫಾರಸ್ಸು) ಸಲ್ಲಿಸುವ ಬಗೆಗೆ. |
| | ಡಾ. ಪುರುಷೋತ್ತಮ ಬಿಳಿಮಲೆ, ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಕರ್ನಾಟಕ ಸರ್ಕಾರ, ಬೆಂಗಳೂರು ಇವರು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಭೇಟಿ ನೀಡಿದ್ದ ಸಂದರ್ಭದಲ್ಲಿ ವಿಶ್ವವಿದ್ಯಾನಿಲಯದ ಲಾಂಛನದಲ್ಲಿ ಕನ್ನಡ ಭಾಷೆಯಲ್ಲಿ ವಿಶ್ವವಿದ್ಯಾನಿಲಯ ಹೆಸರನ್ನು ಸಹ ಸೇರಿಸಲು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ. ಶ್ರೀಯುತರು ನೀಡಿರುವ ಅಭಿಪ್ರಾಯದ ಕುರಿತು ಸುದೀರ್ಘವಾಗಿ ಚರ್ಚಿಸಲಾಗಿ, ಈ ಕೆಳಕಂಡಂತೆ ಕ್ರಮವಹಿಸಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು. |
| ತೀರ್ಮಾನ | **ಮೈಸೂರು ವಿಶ್ವವಿದ್ಯಾನಿಲಯದ ಪ್ರಸ್ತುತವಿರುವ ಲಾಂಛನದ ಯಥಾಸ್ಥಿತಿಯನ್ನೆ ಕಾಯ್ದುಕೊಳ್ಳಲು ಸಿಂಡಿಕೇಟ್ ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು. ಹಾಗೂ ಸದರಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲು ಅನುಮೋದಿಸಿತು.** |

| | |
|---|---|
| ಸಾಮಾನ್ಯ ಸಭೆ 2025/3.14 | ದಿನಸಿ ಪದಾರ್ಥಗಳನ್ನು ಸರಬರಾಜು ಮಾಡುತ್ತಿರುವ ಮೆ.:ವಿನಾಯಕ ಎಂಟರ್‌ಪ್ರೈಸಸ್, ಚಾಮರಾಜನಗರ ಇವರ ಗುತ್ತಿಗೆಯನ್ನು ದಿನಾಂಕ: 19-03-2025 ರಿಂದ 18-06-2025 ರವರೆಗೆ (03 ತಿಂಗಳ ಅವಧಿಗೆ) ಮುಂದುವರೆಸುವ ಬಗ್ಗೆ. |
| ತೀರ್ಮಾನ | **ಮೈಸೂರು ವಿಶ್ವವಿದ್ಯಾನಿಲಯದ ಮೈಸೂರು ನಗರ ವ್ಯಾಪ್ತಿಯ ಸ್ನಾತಕ ಮತ್ತು ಸ್ನಾತಕೋತ್ತರ ವಿದ್ಯಾರ್ಥಿನಿಲಯಗಳಲ್ಲಿನ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ದಿನಸಿ ಪದಾರ್ಥಗಳನ್ನು ಸರಬರಾಜು ಮಾಡುತ್ತಿರುವ ಮೆ.:ವಿನಾಯಕ ಎಂಟರ್‌ಪ್ರೈಸಸ್, ಚಾಮರಾಜನಗರ ಇವರ ಗುತ್ತಿಗೆಯನ್ನು ದಿನಾಂಕ: 19-03-2025 ರಿಂದ 18-06-2025 ರವರೆಗೆ (03 ತಿಂಗಳ ಅವಧಿಗೆ) ಮುಂದುವರೆಸಲು ಆದೇಶಿಸಿರುವುದನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು.** |
| ಸಾಮಾನ್ಯ ಸಭೆ 2025/3.15 | ದೈಹಿಕ ಶಿಕ್ಷಣ ಮತ್ತು ಕ್ರೀಡಾ ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರನ್ನು ನೇಮಿಸಿರುವ ಬಗ್ಗೆ-ಅನುಸಮರ್ಥನೆಗಾಗಿ. |
| ತೀರ್ಮಾನ | **ಪ್ರೊ. ಎಸ್.ಮದಿಅಳಗನ್, ಪ್ರಾಧ್ಯಾಪಕರು, ದೈಹಿಕ ಶಿಕ್ಷಣ ಮತ್ತು ಕ್ರೀಡಾ ಅಧ್ಯಯನ ವಿಭಾಗ, ಸ್ಪೋರ್ಟ್ಸ್ ಪೆವಿಲಿಯನ್, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರನ್ನು ದಿನಾಂಕ: 07-04-2025ರಿಂದ ಅನ್ವಯವಾಗುವಂತೆ ಎರಡು ವರ್ಷಗಳ ಅವಧಿಗೆ ಅಥವಾ ನಿವೃತ್ತಿಯ ದಿನಾಂಕದವರೆಗೆ ಮತ್ತು ವಿಶ್ವವಿದ್ಯಾನಿಲಯದ ಮುಂದಿನ ಆದೇಶದವರೆಗೆ ದೈಹಿಕ ಶಿಕ್ಷಣ ಮತ್ತು ಕ್ರೀಡಾ ಅಧ್ಯಯನ ವಿಭಾಗದ ಅಧ್ಯಕ್ಷರನ್ನಾಗಿ ನೇಮಕ ಮಾಡಿ ಆದೇಶ ಹೊರಡಿಸಿರುವುದನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು.** |
| ಸಾಮಾನ್ಯ ಸಭೆ 2025/3.16 | ವಿಶ್ವವಿದ್ಯಾನಿಲಯದ ಅಧ್ಯಾಪಕರುಗಳಿಗೆ ಅನ್ಯಕಾರ್ಯ ನಿಮಿತ್ತ (OOD) ಮತ್ತು ವಿಶೇಷ ಸಾಂದರ್ಭಿಕ ರಜೆ (SPCL) ಮಂಜೂರು ಮಾಡುವ ಬಗ್ಗೆ. |
| ತೀರ್ಮಾನ | **ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಮತ್ತು ಸ್ನಾತಕಪೂರ್ವ ಕಾಲೇಜುಗಳ ಅಧ್ಯಾಪಕರುಗಳಿಗೆ 2018ರ ಯುಜಿಸಿ ಮಾರ್ಗಸೂಚಿಯನ್ವಯ ಅನ್ಯಕಾರ್ಯ ನಿಮಿತ್ತ (OOD) ರಜೆ ಬದಲಾಗಿ Duty Leave ಅನ್ನು ಮತ್ತು ವಿಶೇಷ ಸಾಂದರ್ಭಿಕ ರಜೆ (SPCL) ಯನ್ನು ಅಳವಡಿಸಿಕೊಳ್ಳಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.** |
| ಸಾಮಾನ್ಯ ಸಭೆ 2025/3.17 | ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರದಲ್ಲಿ ಸ್ಥಾಪಿಸಲಾಗಿರುವ ಬಾಬೂ ಜಗಜೀವನರಾಮ್ ಅಧ್ಯಯನ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ಆಹ್ವಾನಿಸುವ ಬಗೆಗೆ. |
| ತೀರ್ಮಾನ | **ಮುಂದೂಡಲಾಯಿತು.** |
| ಸಾಮಾನ್ಯ ಸಭೆ 2025/3.18 | ಕರ್ನಾಟಕ ರಾಜ್ಯ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯು 2024-25ನೇ ಸಾಲಿನ ಲೆಕ್ಕ ಶೀರ್ಷಿಕೆಯಡಿಯಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಅಭಿವೃದ್ಧಿಗಾಗಿ ಬಿಡುಗಡೆ ಮಾಡಿರುವ ರೂ. 100.00 ಲಕ್ಷಗಳನ್ನು ವಿನಿಯೋಗಿಸಿಕೊಳ್ಳುವ ಬಗ್ಗೆ. |
| ತೀರ್ಮಾನ | ಕರ್ನಾಟಕ ರಾಜ್ಯ ಸರ್ಕಾರವು 2024-25ನೇ ಸಾಲಿನಲ್ಲಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ "ಅಭಿವೃದ್ಧಿ" ಅನುದಾನದಡಿ ಉನ್ನತ ಶಿಕ್ಷಣ ಇಲಾಖೆಯು ಲೆಕ್ಕ ಶೀರ್ಷಿಕೆಯಡಿಯಲ್ಲಿ ಬಿಡುಗಡೆ ಮಾಡಿರುವ ರೂ.100.00 ಲಕ್ಷಗಳ ಅಭಿವೃದ್ಧಿ ಅನುದಾನವನ್ನು ಈ ಕೆಳಕಂಡ ಪ್ರಮುಖ ಕಾಮಗಾರಿಗಳನ್ನು ಕೈಗೊಂಡಿರುವುದಕ್ಕೆ ಅನುಸರಿಸಲಾಗಿರುವ ಕ್ರಮಗಳಿಗೆ ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು.<br>(1) Civil & Electrical minor repair & Maintenance works for 07 Nos P.G. Hostels & 09 Nos U.G.Hostels Buildings of University of Mysore, Mysuru.<br>(2) Providing & fixing of 15Kw on Grid Solar Power Plants for Mathematics & Commerce buildings at Manasagangotri, University of Mysore, Mysuru ಹಾಗೂ<br>(3) Providing & Fixing of 50Kw (25, 15 & 10Kw) on grid solar power plants for Library Building at Manasagangotri, Mysuru. |

| | |
|---|---|
| **ಸಾಮಾನ್ಯ ಸಭೆ 2025/3.19** | ವಿಶ್ವವಿದ್ಯಾನಿಲಯದ P & R ಮಾದರಿ ವಸತಿಗೃಹಗಳನ್ನು ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ, ಮೈಸೂರು ಇಲ್ಲಿನ ಉದ್ಯೋಗಿಗಳಿಗೆ ಹಂಚಿಕೆ ಮಾಡುವ ಬಗ್ಗೆ. |
| **ತೀರ್ಮಾನ** | **ವಿಶ್ವವಿದ್ಯಾನಿಲಯದ ಆರ್ಥಿಕ ಹಿತದೃಷ್ಟಿಯಿಂದ ವಿಶ್ವವಿದ್ಯಾನಿಲಯವು ನಿಗದಿಪಡಿಸಿರುವ ಬಾಡಿಗೆ ಮೊತ್ತವನ್ನು ಪಾವತಿಸಲು ಒಪ್ಪಿದಲ್ಲಿ ಖಾಲಿಯಿರುವ P & R ಮಾದರಿ ವಸತಿಗೃಹಗಳನ್ನು ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ, ಮೈಸೂರು ಇವರೊಂದಿಗೆ ಒಪ್ಪಂದ ಮಾಡಿಕೊಂಡು ಅವರ ಖರ್ಚಿನಲ್ಲಿಯೇ ದುರಸ್ಥಿಗೊಳಿಸಿಕೊಳ್ಳುವ ಷರತ್ತಿನೊಂದಿಗೆ ಅಲ್ಲಿನ ಉದ್ಯೋಗಿಗಳಿಗೆ ಹಂಚಿಕೆ ಮಾಡಲು ಸಿಂಡಿಕೇಟ್ ಸಭೆಯು ನಿರ್ಣಯಿಸಿತು.** |
| **ಸಾಮಾನ್ಯ ಸಭೆ 2025/3.20** | ಮೈಸೂರು ವಿಶ್ವವಿದ್ಯಾನಿಲಯದ ಪ್ರಾಚ್ಯವಿದ್ಯಾ ಸಂಶೋಧನಾಲಯ ಮತ್ತು ಶ್ರೀ ಶ್ರೀ ಶ್ರೀ ಜಗದ್ಗುರು ಶಂಕರಚಾರ್ಯ ಮಹಾಸಂಸ್ಥಾನಂನ ದಕ್ಷಿಣಾಮ್ನಾಯ ಶ್ರೀ ಶಾರದಾ ಪೀಠಂ, ಶೃಂಗೇರಿ ಇವರುಗಳ ನಡುವೆ ಮಾಡಿಕೊಂಡಿರುವ ಒಡಂಬಡಿಕೆಯ ಬಗ್ಗೆ ಅನುಸಮರ್ಥನೆಗಾಗಿ. |
| **ತೀರ್ಮಾನ** | **ಮಾನ್ಯ ಕುಲಪತಿಯವರ ಆದೇಶಾನುಸಾರ ಸಿಂಡಿಕೇಟ್ ಸಭೆಯ ಅನುಮೋದನೆಯನ್ನು ಕಾಯ್ದಿರಿಸಿ ಮೈಸೂರು ವಿಶ್ವವಿದ್ಯಾನಿಲಯದ ಪ್ರಾಚ್ಯವಿದ್ಯಾ ಸಂಶೋಧನಾಲಯ ಮತ್ತು ಶ್ರೀ ಶ್ರೀ ಶ್ರೀ ಜಗದ್ಗುರು ಶಂಕರಚಾರ್ಯ ಮಹಾಸಂಸ್ಥಾನಂನ ದಕ್ಷಿಣಾಮ್ನಾಯ ಶ್ರೀ ಶಾರದಾ ಪೀಠಂ, ಶೃಂಗೇರಿ ಇವರುಗಳ ನಡುವೆ ವಿಶ್ವವಿದ್ಯಾನಿಲಯದ ಪ್ರಾಚ್ಯವಿದ್ಯಾ ಸಂಶೋಧನಾಲಯದಲ್ಲಿರುವ 13000 ಹಸ್ತಪ್ರತಿಗಳನ್ನು ಆರ್ಥಿಕ ನೆರವಿನೊಂದಿಗೆ Descriptive Catalogue ಮಾಡುವ ಉದ್ದೇಶಕ್ಕಾಗಿ ಮಾಡಿಕೊಂಡಿರುವ ಒಡಂಬಡಿಕೆಯನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು.** |

**ಇತರೆ ವಿಷಯಗಳು:**

1. ಡಾ. ಬಸವರಾಜು ಸಿ ರವರು ಮಾತನಾಡಿ, ಕನಕದಾಸ ಅಧ್ಯಯನ ಕೇಂದ್ರವನ್ನು ವಿಶ್ವವಿದ್ಯಾನಿಲಯದಲ್ಲಿ ಪ್ರಾರಂಭ ಮಾಡುವ ಸಂಬಂಧ ಈಗಾಗಲೇ ಸಿಂಡಿಕೇಟ್ ಸಭೆಯಲ್ಲಿ ಚರ್ಚಿಸಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿ ರಾಜ್ಯ ಸರ್ಕಾರದ ಆಯವ್ಯಯದಲ್ಲಿ ಹಣವನ್ನು ಸೇರ್ಪಡೆಗೊಳಿಸುವ ಸಂಬಂಧ ಈಗಾಗಲೇ ಕೋರಲಾಗಿತ್ತು ಆದರೆ ಇದುವರೆಗೂ ಸದರಿ ವಿಷಯದ ಕುರಿತು ಯಾವುದೇ ಕ್ರಮ ವಹಿಸಲು ಸಾಧ್ಯವಾಗಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಹಣಕಾಸು ವರ್ಷದಲ್ಲಿ ಕನಕದಾಸ ಅಧ್ಯಯನ ಕೇಂದ್ರವನ್ನು ಸ್ಥಾಪಿಸುವ ಸಂಬಂಧ ಸರ್ಕಾರದಿಂದ ಅನುದಾನವನ್ನು ಪಡೆಯಲು ಸಾಧ್ಯವಾಗಿರುವುದಿಲ್ಲ. ಆದುದರಿಂದ ಸದರಿ ವಿಷಯದ ಕುರಿತು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುವ ಬಗ್ಗೆ ತ್ವರಿತಗತಿಯಲ್ಲಿ ಕ್ರಮಕೈಗೊಳ್ಳಬೇಕೆಂದು ಕೋರಿದರು. ಮಾನ್ಯ ಕುಲಪತಿಯವರು ಮಾತನಾಡಿ, ಈ ಸಂಬಂಧ ಸರ್ಕಾರಕ್ಕೆ ಪತ್ರ ಬರೆಯಲಾಗುವುದೆಂದು ತಿಳಿಸಿದರು.

2. ಡಾ. ಬಸವರಾಜು ಸಿ ರವರು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸ್ನಾತಕೋತ್ತರ ಪದವಿಯನ್ನು ಪೂರ್ಣಗೊಳಿಸಿ ಪಿಹೆಚ್.ಡಿ. ಸಂಶೋಧನೆಯನ್ನು ಕೈಗೊಳ್ಳಲು ಈಗಾಗಲೇ ಹಲವು ವಿದ್ಯಾರ್ಥಿಗಳು ಪಿಹೆಚ್.ಡಿ. ಪ್ರವೇಶಾತಿಯ ಪರೀಕ್ಷೆಯಲ್ಲಿ ತೇರ್ಗಡೆಗೊಂಡು ಸಂಶೋಧನೆಯನ್ನು ಕೈಗೊಳ್ಳಲು ಮಾರ್ಗದರ್ಶಕರ ಕೊರತೆಯಿಂದ ಹಲವಾರು ವಿದ್ಯಾರ್ಥಿಗಳು ವಂಚಿತರಾಗಿದ್ದು, ಪ್ರಸ್ತುತ ಇರುವ ಮಾರ್ಗದರ್ಶಕರ ನಿಯಮಾವಳಿಯಲ್ಲಿನ 8 ವಿದ್ಯಾರ್ಥಿಗಳಿಗೆ ಮಾತ್ರ ಮಾರ್ಗದರ್ಶಕರಾಗಿ ಕರ್ತವ್ಯ ನಿರ್ವಹಿಸುವುದು ಎಂಬುದನ್ನು ಸಡಿಲಿಸಬೇಕು ಇಲ್ಲವಾದಲ್ಲಿ ಹೆಚ್ಚುವರಿಯಾಗಿ ವಿದ್ಯಾರ್ಥಿಗಳನ್ನು ಸೇರ್ಪಡೆ ಮಾಡಿಕೊಳ್ಳಲು ಅನುವು ಮಾಡಿಕೊಡಬೇಕು ಎಂದು ಮನವಿ ಮಾಡಿದರು.

ಮಾನ್ಯ ಕುಲಪತಿಯವರು ಮಾತನಾಡಿ, ಅಧ್ಯಾಪಕರಿಗೆ ಎಂಟಕ್ಕಿಂತ ಹೆಚ್ಚುವರಿಯಾಗಿ ಸಂಶೋಧನಾ ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರಾಗಿ ಕಾರ್ಯನಿರ್ವಹಿಸಲು ಯುಜಿಸಿ ಮಾರ್ಗಸೂಚಿಯನ್ವಯ ನೀಡಲು ಸಾಧ್ಯವಾಗುವುದಿಲ್ಲ. ಈಗಾಗಲೇ ಕಳೆದ ಹಲವಾರು ವರ್ಷಗಳಲ್ಲಿ ಎಂಟಕ್ಕಿಂತ ಹೆಚ್ಚುವರಿಯಾಗಿ ಉದಾಹರಣೆಗೆ 14 ವಿದ್ಯಾರ್ಥಿಗಳಿಗೂ ಸಹ ಮಾರ್ಗದರ್ಶಕರಾಗಿ ಕಾರ್ಯನಿರ್ವಹಿಸುತ್ತಿರುವ ಅಧ್ಯಾಪಕರುಗಳು ವಿಶ್ವವಿದ್ಯಾನಿಲಯದಲ್ಲಿದ್ದು ಸದರಿ ಅಧ್ಯಾಪಕರುಗಳು 14 ವಿದ್ಯಾರ್ಥಿಗಳಿಗೆ ಏಕಕಾಲದಲ್ಲಿ ಮಾರ್ಗದರ್ಶನ ನೀಡುವುದು ಹೇಗೆ ಸಾಧ್ಯವಾಗುತ್ತದೆ ಎಂಬುದೆ ಒಂದು ಪ್ರಶ್ನೆಯಾಗಿದೆ ಈ ರೀತಿಯಾಗಿ ನಿಯಮಗಳನ್ನು ಮೀರಿ ಮಾರ್ಗದರ್ಶನವನ್ನು ಮಾಡಿದಲ್ಲಿ ಅಧ್ಯಾಪಕರುಗಳ ಸಂಶೋಧನಾ ಚಟುವಟಿಕೆ ಕುಂಠಿತಗೊಂಡಿರುವುದರಿಂದ ವಿಶ್ವವಿದ್ಯಾನಿಲಯವು ನ್ಯಾಕ್ ಮತ್ತು ಇತರೆ ಸಂಸ್ಥೆಗಳಿಂದ ಉನ್ನತ ಶ್ರೇಯಾಂಕವನ್ನು ಪಡೆಯಲು ಸಾಧ್ಯವಾಗುತ್ತಿಲ್ಲವೆಂದು ತಿಳಿಸಿದರು.

ಶ್ರೀ ಗೋಕುಲ್ ಗೋವರ್ಧನ್‌ರವರು ಮಾತನಾಡಿ, ಯುಜಿಸಿ ನಿಯಮಾವಳಿಯನ್ವಯ ಒಬ್ಬ ಅಧ್ಯಾಪಕರು ಎಂಟು ಸಂಶೋಧನಾ ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರಾಗಿ ಕಾರ್ಯನಿರ್ವಹಿಸಲು ಅವಕಾಶವಿದ್ದು ಸದರಿ ನಿಯಮದಂತೆ ಎಂಟು ವಿದ್ಯಾರ್ಥಿಗಳಿಗೆ ನಿಯಮಗಳು ಅನ್ವಯಿಸುತ್ತದೆ. ಆದರೆ ಎಂಟರ ನಂತರ ಹೆಚ್ಚುವರಿಯಾಗಿ ಸಂಶೋಧನಾ ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರಾಗಿ ಕಾರ್ಯನಿರ್ವಹಿಸುತ್ತಿದ್ದಲ್ಲಿ ಸಾಮಾಜಿಕ ನ್ಯಾಯವನ್ನು ಅನುಸರಿಸಲು ವಿಫಲವಾದಂತಾಗುತ್ತದೆ ಈ ಹಿನ್ನೆಲೆಯಲ್ಲಿ ಒಬ್ಬ ಅಧ್ಯಾಪಕರು ನಿಯಮಗಳನ್ವಯ ಎಂಟು ವಿದ್ಯಾರ್ಥಿಗಳಿಗೆ ಮಾತ್ರ ಸಂಶೋಧನಾ ಮಾರ್ಗದರ್ಶಕರಾಗಿ ಕಾರ್ಯನಿರ್ವಹಿಸುವುದು ಸೂಕ್ತವೆಂದು ತಿಳಿಸಿದರು.

ಡಾ.ನಟರಾಜ್ ಹೆಚ್.ಎಸ್ ರವರು ಮಾತನಾಡಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಎಂ.ಎ.ವ್ಯಾಸಂಗ ಪೂರ್ಣಗೊಳಿಸಿ, ಪಿಹೆಚ್.ಡಿ ಪ್ರವೇಶ ಪರೀಕ್ಷೆಯಲ್ಲಿ ತೇರ್ಗಡೆಗೊಂಡು, ಕೋರ್ಸ್ ವರ್ಕ್‌ನ್ನು ಸಹ ಪೂರ್ಣಗೊಳಿಸಿ ಹಲವಾರು ವಿದ್ಯಾರ್ಥಿಗಳು ಪಿಹೆಚ್.ಡಿ. ನೊಂದಾಣಿಗೆ ಶುಲ್ಕವನ್ನು ಸಹ ಪಾವತಿಸಿರುತ್ತಾರೆ. ಆದರೆ ಸದರಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರ ಕೊರತೆಯಿರುವುದರಿಂದ ಹೆಚ್ಚುವರಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರಾಗಿ ಕಾರ್ಯನಿರ್ವಹಿಸಲು ಅಧ್ಯಾಪಕರಿಗೆ ಅನುವು ಮಾಡಿಕೊಡಬೇಕೆಂದು ಮನವಿ ಮಾಡಿದರು. ಸದರಿ ವಿಷಯವನ್ನು ಬೆಂಬಲಿಸಿ ಡಾ. ಬಸವರಾಜು.ಸಿ ಇವರು ಸಹ ವಿಶೇಷ ಪ್ರಕರಣವೆಂದು ಪರಿಗಣಿಸಿ ಇದೊಂದು ಬಾರಿ ಮಾತ್ರ ಹೆಚ್ಚುವರಿ ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸಬೇಕೆಂದು ಮನವಿ ಮಾಡಿದರು.

ಶ್ರೀ ಮಹದೇಶುರವರು ಮಾತನಾಡಿ, ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಮಾರ್ಗದರ್ಶಕರ ಕೊರತೆ ಇರುವುದರಿಂದ ಸಂಶೋಧನೆಯನ್ನು ಕೈಗೊಳ್ಳುವ ವಿದ್ಯಾರ್ಥಿಗಳಿಗೆ ಎಂಟಕ್ಕಿಂತ ಹೆಚ್ಚಿನ ವಿದ್ಯಾರ್ಥಿಗಳನ್ನು ತೆಗೆದುಕೊಂಡು ಮಾರ್ಗದರ್ಶನ ನೀಡುವ ಅವಕಾಶವನ್ನು ಕಲ್ಪಿಸಲು ಸಿಂಡಿಕೇಟ್ ಸಭೆಯಲ್ಲಿ ನಿರ್ಣಯವನ್ನು ತೆಗೆದುಕೊಳ್ಳುವುದು ಸೂಕ್ತವೆಂದು ತಿಳಿಸಿದರು.

ಮಾನ್ಯ ಕುಲಪತಿಯವರು ಮಾತನಾಡಿ, ತಮ್ಮ ಕೋರಿಕೆಯಂತೆ ಹೆಚ್ಚುವರಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರಾಗಿ ಕಾರ್ಯನಿರ್ವಹಿಸಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ. ಈ ರೀತಿ ನಿಯಮಗಳನ್ನು ಉಲ್ಲಂಘಿಸಿ ಹೆಚ್ಚುವರಿ ವಿದ್ಯಾರ್ಥಿಗಳಿಗೆ ಅವಕಾಶ ನೀಡುವುದರ ಬದಲಾಗಿ ಈಗಾಗಲೇ ವಿಶ್ವವಿದ್ಯಾನಿಲಯದಲ್ಲಿ ಖಾಯಂ ಅಧ್ಯಾಪಕರುಗಳ ಕೊರತೆ ಬಹಳಷ್ಟಿದ್ದು ಮಾರ್ಗದರ್ಶಕರ ಕೊರತೆಯಿರುವುದರಿಂದ ಯುಜಿಸಿ ನಿಯಮದನ್ವಯ ಎಂಟಕ್ಕಿಂತ ಮೇಲ್ಪಟ್ಟು ಹೆಚ್ಚುವರಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರಾಗಿ ಕಾರ್ಯನಿರ್ವಹಿಸಲು ಅನುಮತಿ ನೀಡುವಂತೆ ಕೋರಿ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ಬೆಂಗಳೂರು ಇವರಿಗೆ ಪತ್ರ ಬರೆಯಲಾಗುವುದೆಂದು ತಿಳಿಸಿದರು.

ಕುಲಸಚಿವರು (ಪರೀಕ್ಷಾಂಗ) ರವರು ಮಾತನಾಡಿ, ಒಬ್ಬ ಅಧ್ಯಾಪಕರ ಬಳಿ ಎಂಟಕ್ಕಿಂತ ಮೇಲ್ಪಟ್ಟು ಹೆಚ್ಚುವರಿ ಸಂಶೋಧನಾ ವಿದ್ಯಾರ್ಥಿಯಾಗಿ ಕಾರ್ಯನಿರ್ವಹಿಸುತ್ತಿರುವ ಸಂಶೋಧನಾ ವಿದ್ಯಾರ್ಥಿಗಳು ಸಂಶೋಧನೆಗೆ ನೋಂದಣಿಯಾದ ದಿನಾಂಕದಿಂದ ಐದು ವರ್ಷದೊಳಗೆ ಸಂಶೋಧನಾ ಕಾರ್ಯವನ್ನು ಪೂರ್ಣಗೊಳಿಸಬೇಕು, ಐದು ವರ್ಷ ಪೂರ್ಣಗೊಂಡು ಒಂದು ದಿನ

ತಡವಾಗಿಯೂ ಸಹ ಮಹಾಪ್ರಬಂಧವನ್ನು ಸಲ್ಲಿಸಿದಲ್ಲಿ ಸದರಿ ವಿದ್ಯಾರ್ಥಿಗಳ ನೋಂದಣಿಯನ್ನು ರದ್ದುಪಡಿಸುವುದು ಸೂಕ್ತವೆಂದು ಸಲಹೆ ನೀಡಿದರು.

ಸುಧೀರ್ಘ ಚರ್ಚೆಯ ನಂತರ ಕುಲಸಚಿವರು (ಪರೀಕ್ಷಾಂಗ) ರವರ ಸಲಹೆಯಂತೆ ಕ್ರಮವಹಿಸಲು ಸಿಂಡಿಕೇಟ್‌ನ ಎಲ್ಲಾ ಸದಸ್ಯರು ಸರ್ವಾನುಮತದಿಂದ ಅನುಮೋದನೆ ನೀಡಿದರು.

3. ಡಾ. ಟಿ.ಆರ್. ಚಂದ್ರಶೇಖರ್‌ರವರು ಮಾತನಾಡಿ, ಹಾಸನ ಸ್ನಾತಕೋತ್ತರ ಕೇಂದ್ರದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಂತಹ ಪ್ರೊ. ಬಿ.ಮಹದೇವಪ್ಪರವರ ನಿವೃತ್ತಿಗೆ ಸಂಬಂಧಿಸಿದಂತೆ ದಿನಾಂಕ 21-12-2024 ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ಹಿಂದಿನ ಕುಲಸಚಿವರು ಮಾತನಾಡಿ, ದಿನಾಂಕ 28-11-2024ರಂದು ಉನ್ನತ ಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯಲ್ಲಿನ ತೀರ್ಮಾನದಂತೆ ಪ್ರೊ.ಬಿ. ಮಹದೇವಪ್ಪ, ಹಾಸನ ವಿಶ್ವವಿದ್ಯಾನಿಲಯ, ಹಾಸನ ಇವರನ್ನು ನಿವೃತ್ತ ಪ್ರಾಧ್ಯಾಪಕರ ಪಟ್ಟಿಯಲ್ಲಿ ಸೇರ್ಪಡೆಗೊಳಿಸಲಾಗಿದೆ ಎಂದು ತಿಳಿಸಿದರು. ಪ್ರೊ. ಬಿ.ಮಹದೇವಪ್ಪ ಇವರು ಹಾಸನ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರಲ್ಲ ಬದಲಾಗಿ ಸದರಿಯವರು ಮೈಸೂರು ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರಾಗಿದ್ದು ಸದರಿಯವರು ಈಗಾಗಲೇ ಈ ಸಂಬಂಧ ಘನ ನ್ಯಾಯಾಲಯದಲ್ಲಿ ಮೊಕದ್ದಮೆಯನ್ನು ದಾಖಲಿಸಿರುತ್ತಾರೆ ಈ ಹಿನ್ನೆಲೆಯಲ್ಲಿ ಹಾಸನ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರೆಂದು ನಮೂದಿಸುವ ಬದಲಾಗಿ ಹಾಸನ ಸ್ನಾತಕೋತ್ತರ ಕೇಂದ್ರದ ಮೈಸೂರು ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರು ಎಂದು ನಮೂದಿಸುವಂತೆ ಆಕ್ಷೇಪಣೆಯನ್ನು ವ್ಯಕ್ತಪಡಿಸಿರುವುದಾಗಿ ತಿಳಿಸಿದರು. ದಿನಾಂಕ 08-01-2025ರಂದು ವಿಶ್ವವಿದ್ಯಾನಿಲಯದ ವಯೋನಿವೃತ್ತಿ ಹೊಂದುವ ಅಧ್ಯಾಪಕರುಗಳ ಪಟ್ಟಿಯನ್ನು ಅಧಿಸೂಚನೆ ಮೂಲಕ ಅಧಿಸೂಚಿಸಿರುತ್ತೀರಿ. ಪ್ರೊ.ಬಿ.ಮಹದೇವಪ್ಪ ಇವರು ಹಾಸನ ವಿಶ್ವವಿದ್ಯಾನಿಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು ಇದೊಂದು ವಿಶೇಷ ಪ್ರಕರಣವಾಗಿದ್ದು ಪ್ರಕರಣ ನ್ಯಾಯಾಲಯದಲ್ಲಿದ್ದು ಮಧ್ಯಂತರ ಆದೇಶವಿರುವುದಾಗಿ ಸಭೆಯಲ್ಲಿ ತಿಳಿಸಿರುವುದಾಗಿ ಹೇಳಿದರು. ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾನಿಲಯವು ದಿನಾಂಕ 08-01-2025ರಂದು ಅಧಿಸೂಚಿಸಿರುವ ಅಧಿಸೂಚನೆಗೆ ತಿದ್ದುಪಡಿ ತರುವಂತೆ ದಿನಾಂಕ 13-02-2025ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ನಾನು ತಿಳಿಸಿದ್ದರೂ ಸಹ ಮಾನ್ಯ ಕುಲಪತಿಯವರು ಅಂದಿನ ಸಭೆಯಲ್ಲಿ ಪ್ರೊ. ಬಿ.ಮಹದೇವಪ್ಪ ರವರು ಸ್ನಾತಕೋತ್ತರ ಕೇಂದ್ರ, ಹಾಸನ ಎಂದು ತಿದ್ದುಪಡಿ ಮಾಡಲು ಸಾಧ್ಯವಿಲ್ಲ ಅವರು ಹಾಸನ ವಿಶ್ವವಿದ್ಯಾನಿಲಯಕ್ಕೆ ಸೇರಿದವರೆಂದು ತಿಳಿಸಿರುತ್ತಾರೆ. ಆದರೂ ಸಹ ಸಿಂಡಿಕೇಟ್ ಸಭೆಯಲ್ಲಿ ಅನುಮೋದನೆಯನ್ನು ನೀಡಲಾಗಿರುತ್ತದೆ. ದಿನಾಂಕ 30-04-2025ರಂದು ಪ್ರೊ.ಬಿ.ಮಹದೇವಪ್ಪ ಇವರು ವಯೋನಿವೃತ್ತಿ ಹೊಂದಬೇಕಾಗಿರುತ್ತದೆ. ಆದರೆ ಅವರು ದಿನಾಂಕ 02-05-2025ರಂದು ಹಾಸನ ವಿಶ್ವವಿದ್ಯಾನಿಲಯದಲ್ಲಿ ಕರ್ತವ್ಯದ ಮೇಲೆ ಮುಂದುವರೆದಿರುತ್ತಾರೆ. ಹಾಸನ ವಿಶ್ವವಿದ್ಯಾನಿಲಯದ ಕುಲಸಚಿವರು ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವರಿಗೆ ಪತ್ರ ಬರೆದು ಪ್ರೊ. ಬಿ.ಮಹಾದೇವಪ್ಪರವರು ವಯೋನಿವೃತಿಗೊಂಡಿರುವುದರಿಂದ ಬಿಡುಗಡೆಗೊಳಿಸಲು ಸಾಧ್ಯವಿಲ್ಲ ಮೈಸೂರು ವಿಶ್ವವಿದ್ಯಾನಿಲಯವೇ ವೇತನ, ಪದೋನ್ನತ್ತಿಯನ್ನು ನೀಡಿರುವುದರಿಂದ ಅವರನ್ನು ಸೇವೆಯಿಂದ ಬಿಡುಗಡೆಗೊಳಿಸಬೇಕೆಂದು ತಿಳಿಸಿರುತ್ತಾರೆ. ಇದಕ್ಕೆ ಸಂಬಂಧಪಟ್ಟಂತೆ ಉಚ್ಚ ನ್ಯಾಯಾಲಯದ ವಕೀಲರಿಂದ ಲೀಗಲ್ ನೋಟಿಸ್‌ನ್ನು ಜಾರಿಗೊಳಿಸಿರುವರೆಂದು ತಿಳಿಸಿದರು. ಮುಂದುವರೆದು, ದಿನಾಂಕ 29-04-2025 ರಿಂದ ಜಾರಿಗೆ ಬಂದಂತೆ ಪ್ರೊ.ಬಿ.ಮಹದೇವಪ್ಪ ಇವರನ್ನು ದಿನಾಂಕ 12-05-2025ರ ಪತ್ರದ ಮುಖೇನ ಮೈಸೂರು ವಿಶ್ವವಿದ್ಯಾನಿಲಯದ ವತಿಯಿಂದಲೇ ಬಿಡುಗಡೆಗೊಳಿಸಿರುತ್ತೀರಿ. ಸಿಂಡಿಕೇಟ್ ಸಭೆಯ ತೀರ್ಮಾನ ಹಾಗೂ ಸರ್ಕಾರದ ನಿರ್ಣಯದಂತೆ ಮೈಸೂರು ವಿಶ್ವವಿದ್ಯಾನಿಲಯ ವಯೋನಿವೃತ್ತಿ ಆದೇಶ ನೀಡಲು ಸಾಧ್ಯವಿಲ್ಲ, ಒಂದು ವೇಳೆ ನಿವೃತ್ತಿಗೊಳಿಸಬೇಕಾದಲ್ಲಿ ಸಿಂಡಿಕೇಟ್ ನಿರ್ಣಯವನ್ನು ತಿದ್ದುಪಡಿ ಮಾಡಬೇಕು, ಅಧಿಸೂಚನೆಯನ್ನು ರದ್ದುಗೊಳಿಸಬೇಕು, ಹಾಸನ ವಿಶ್ವವಿದ್ಯಾನಿಲಯದ ಕುಲಸಚಿವರ ಪತ್ರಕ್ಕೆ ಉತ್ತರ ನೀಡಬೇಕೆಂದು ಹಾಗೂ ನ್ಯಾಯಾಲಯಕ್ಕೆ ಉತ್ತರವನ್ನು ನೀಡಬೇಕು ಏಕೆಂದರೆ ಪ್ರಕರಣ ನ್ಯಾಯಾಲಯದಲ್ಲಿರುವುದಾಗಿ ತಿಳಿಸಿದರು. ತದನಂತರ ವಿಷಯವನ್ನು ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿ ನಂತರ ನಿವೃತ್ತಿಗೊಳಿಸಬೇಕೆಂದು ತಿಳಿಸಿದರು.

ಮಾನ್ಯ ಕುಲಪತಿಯವರು ಮಾತನಾಡಿ, ಪ್ರಸ್ತುತ ಪ್ರೊ. ಬಿ.ಮಹದೇವಪ್ಪ ಇವರು ಹಾಸನ ವಿಶ್ವವಿದ್ಯಾನಿಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿದುದ್ದರಿಂದ ಸದರಿ ವಿಶ್ವವಿದ್ಯಾನಿಲಯದವರೇ ಸದರಿಯವರನ್ನು ಸೇವೆಯಿಂದ ಬಿಡುಗಡೆಗೊಳಸಬೇಕಾಗಿತ್ತು ಆದರೆ ಹಾಸನ ವಿಶ್ವವಿದ್ಯಾನಿಲಯದ ಕುಲಸಚಿವರು ಪ್ರೊ. ಬಿ.ಮಹದೇವಪ್ಪ ಇವರನ್ನು ಬಿಡುಗಡೆಗೊಳಸದೆ ಇರುವುದನ್ನು ರಾಜ್ಯ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳ ಗಮನಕ್ಕೆ ತರಲಾಗಿ ಪ್ರೊ. ಬಿ.ಮಹದೇವಪ್ಪ ಅವರ ಸೇವಾ ಪುಸ್ತಕ ಮೈಸೂರು ವಿಶ್ವವಿದ್ಯಾನಿಲಯದಲ್ಲಿಯೇ ಇರುವುದರಿಂದ ಪ್ರೊ. ಬಿ.ಮಹದೇವಪ್ಪ ಅವರನ್ನು ಮೈಸೂರು ವಿಶ್ವವಿದ್ಯಾನಿಲಯದ ವತಿಯಿಂದಲೇ ಬಿಡುಗಡೆಗೊಳಸುವಂತೆ ಮೌಖಿಕವಾಗಿ ಸೂಚನೆ ನೀಡಿರುವ ಹಿನ್ನೆಲೆಯಲ್ಲಿ ಸದರಿಯವರನ್ನು ದಿನಾಂಕ 29-04-2025ರಿಂದ ಜಾರಿಗೆ ಬಂದಂತೆ ದಿನಾಂಕ 12-05-2025ರ ಪತ್ರ ಮುಖೇನ ಬಿಡುಗಡೆಗೊಳಸಲಾಗಿರುತ್ತದೆ ಎಂದು ಸಭೆಯ ಗಮನಕ್ಕೆ ತಂದರು.

4. ಶ್ರೀ ಗೋಕುಲ್ ಗೋವರ್ಧನ್‌ರವರು ಮಾತನಾಡಿ ಈ ಕೆಳಕಂಡ ವಿಷಯಗಳ ಕುರಿತು ಅಗತ್ಯ ಕ್ರಮವಹಿಸುವಂತೆ ಸಭೆಯ ಗಮನಕ್ಕೆ ತಂದರು.

ಅ) ವಿದ್ಯಾರ್ಥಿನಿಲಯದ ಕುಂದುಕೊರತೆಗಳಗೆ ಸಂಬಂಧಿಸಿದಂತೆ ಸಿಂಡಿಕೇಟ್ ಸದಸ್ಯರನ್ನೊಳಗೊಂಡ ಸಮಿತಿಯು ನಾಲ್ಕು ಸಭೆಯನ್ನು ನಡೆಸಿ ಸುದೀರ್ಘವಾಗಿ ಚರ್ಚಿಸಿ ವಿದ್ಯಾರ್ಥಿನಿಲಯಕ್ಕೆ ಸಂಬಂಧಿಸಿದಂತೆ ಸುಧಾರಣೆಗಳನ್ನು ಮಾಡಲು ಶಿಫಾರಸ್ಸು ಮಾಡಿರುವುದಾಗಿ ತಿಳಸಿದರು. ಕೆಲವು ವಿಭಾಗಗಳಲ್ಲಿ ಸಫಾಯಿ ಕರ್ಮಚಾರಿಗಳು ಕರ್ತವ್ಯವನ್ನು ಸರಿಯಾಗಿ ನಿರ್ವಹಿಸುತ್ತಿಲ್ಲವೆಂಬ ದೂರು ಬಂದಿದ್ದು, ಕೆಲವು ಸಫಾಯಿ ಕರ್ಮಚಾರಿಗಳು 59-60 ವರ್ಷ ವಯಸ್ಸಿನವರಾಗಿದ್ದು ಆರೋಗ್ಯ ಸಮಸ್ಯೆಯಿದ್ದು ತಮ್ಮ ಕರ್ತವ್ಯವನ್ನು ಸರಿಯಾಗಿ ನಿರ್ವಹಿಸುತ್ತಿಲ್ಲ, ಇವರು ವಯೋನಿವೃತ್ತಿಯನ್ನು ತಲುಪಿದರೂ ಸಹ ಇವರನ್ನು ನಿವೃತ್ತಿಗೊಳಸಿಲ್ಲವೇಕೆ ಎಂದು ಕೇಳದರು.

ಮಾನ್ಯ ಕುಲಪತಿಯವರು ಮಾತನಾಡಿ, ಕೆಲವು ಸಫಾಯಿ ಕರ್ಮಚಾರಿಗಳ ನೈಜ ಜನ್ಮದಿನಾಂಕಕ್ಕೆ ಸಂಬಂಧಿಸಿದ ದಾಖಲೆಗಳು ಲಭ್ಯವಿರುವುದಿಲ್ಲ ಈ ವಿಷಯದ ಕುರಿತು ಸೂಕ್ತ ಕ್ರಮಕೈಗೊಳ್ಳಲಾಗುವುದೆಂದು ತಿಳಸಿದರು.

ಆ) ವಿಶ್ವವಿದ್ಯಾನಿಲಯದ ಆವರಣದಲ್ಲಿ ಹಲವು ಸಂಸ್ಥೆಗಳಗೆ ಬಾಡಿಗೆ ರೂಪದಲ್ಲಿ ಕಟ್ಟಡಗಳನ್ನು ನೀಡಿದ್ದು ಹಾಗೂ ವಾಣಿಜ್ಯ ಉದ್ದೇಶದಿಂದ ಹಲವಾರು ಅಂಗಡಿಗಳಗೆ ಮಳಗೆಯನ್ನು ಬಾಡಿಗೆಗೆ ನೀಡಲಾಗಿದೆ. ವಿಶ್ವವಿದ್ಯಾನಿಲಯ ನಿಗದಿಗೊಳಸಿರುವ ಬಾಡಿಗೆಯು ತೀರ ಕಡಿಮೆ ಇದ್ದು, ಶೀಘ್ರವಾಗಿ ಬಾಡಿಗೆಯನ್ನು ಹೆಚ್ಚಳ ಮಾಡಿದಲ್ಲಿ ವಿಶ್ವವಿದ್ಯಾನಿಲಯಕ್ಕೆ ಆರ್ಥಿಕವಾಗಿ ಅನುಕೂಲವಾಗುತ್ತದೆಯೆಂದು ತಿಳಸಿದರು. ಉದಾಹರಣೆಗೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಪೆಟ್ರೋಲ್ ಬಂಕ್ ಹಾಗೂ ಇತರೆ ಅಂಗಡಿ ಮಳಗೆಗಳ ದರವನ್ನು ಹೆಚ್ಚಳ ಮಾಡಬೇಕೆಂದು ಸಲಹೆ ನೀಡಿದರು.

ಕುಲಸಚಿವರು ಮಾತನಾಡಿ, ವಿಶ್ವವಿದ್ಯಾನಿಲಯವು ಬಾಡಿಗೆಗೆ ನೀಡಿರುವ ಬಾಡಿಗೆದಾರರ ಪಟ್ಟಿಯನ್ನು ಸಿದ್ಧಪಡಿಸಿದ್ದು, ಬಾಡಿಗೆಯನ್ನು ಬಾಕಿ ಉಳಸಿಕೊಂಡಿರುವ ಬಾಡಿಗೆದಾರರ ವಿವರವನ್ನು ಈಗಾಗಲೇ ಪರಿಶೀಲಸಲಾಗಿದ್ದು ಬಾಕಿ ಬಾಡಿಗೆಯನ್ನು ವಸೂಲ ಮಾಡುವುದರ ಸಂಬಂಧ ಹಾಗೂ ಬಾಡಿಗೆಯನ್ನು ಪರಿಷ್ಕರಿಸುವುದರ ಸಂಬಂಧ ಕ್ರಮವಹಿಸಲಾಗುವುದೆಂದು ತಿಳಸಿದರು.

ಶ್ರೀ ನಾಗರಾಜು ಸಿ ರವರು ಮಾತನಾಡಿ, ಕೆಲವು ಮಳಗೆಗಳ ಅವಧಿ ಮುಗಿದಿದ್ದರೂ ಸಹ ವಿಶ್ವವಿದ್ಯಾನಿಲಯವು ಬಾಡಿಗೆದಾರರನ್ನು ಮುಂದುವರೆಸಿದೆ ಏಕೆ ಎಂದು ಕೇಳದರು.

ಕುಲಸಚಿವರು ಮಾತನಾಡಿ, ಮಳಗೆ ಅವಧಿ ಮುಗಿದಿದೆ ವಿಶ್ವವಿದ್ಯಾನಿಲಯಕ್ಕೆ ಸಂದಾಯ ಮಾಡಬೇಕಾದ ಬಾಡಿಗೆಯ ಬಾಕಿಯನ್ನು ಪಾವತಿಸಿಲ್ಲವೆಂದು ತಿಳಸಿದರು.

ಶ್ರೀ ನಾಗರಾಜು ಸಿ ರವರು ಮಾತನಾಡಿ ವಿಶ್ವವಿದ್ಯಾನಿಲಯಕ್ಕೆ ಬಾಡಿಗೆದಾರರು ಪಾವತಿಸುತ್ತಿರುವ ಬಾಡಿಗೆ ರೂ.3000/-, ಆದರೆ ಬಾಡಿಗೆದಾರರು ಒಳಬಾಡಿಗೆಯನ್ನು (sublease) ನೀಡಿ ರೂ.28,000/-ನ್ನು ವಸೂಲಾತಿ ಮಾಡುತ್ತಿದ್ದಾರೆಂದು ಸಭೆಯ ಗಮನಕ್ಕೆ ತಂದರು. ಈ ವಿಷಯಕ್ಕೆ ಸಂಬಂಧಿಸಿದಂತೆ ಡಾ. ನಟರಾಜ್ ಹೆಚ್.ಎಸ್‌ರವರು ಸಹ ದನಿಗೂಡಿಸಿದರು.

ಶ್ರೀ ಗೋಕುಲ್ ಗೋವರ್ಧನ್‌ರವರು ಮಾತನಾಡಿ Karnataka Public Premises (Eviction of Unauthorized) Actರಲ್ಲಿ ತಿಳಿಸಿರುವಂತೆ ಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸಿದರು. ಮಳಿಗೆಯಲ್ಲಿ ಯಂತ್ರಗಳು ಹಾಗೂ ಇನ್ನಿತರ ವಸ್ತುಗಳಿರುವುದರಿಂದ ಏಕಾಏಕಿ ಬೀಗ ಹಾಕುವುದು ಸೂಕ್ತವಲ್ಲವೆಂದು ತಿಳಿಸಿದರು.

ಮಾನ್ಯ ಕುಲಪತಿಯವರು ಮಾತನಾಡಿ, ಎಲ್ಲಾ ಮಳಿಗೆಯ ಬಾಡಿಗೆದಾರರಿಗೆ ನೋಟಿಸ್ ಜಾರಿಗೊಳಿಸಿ ಅವಧಿ ಮುಗಿದಿರುವುದರಿಂದ ಮಳಿಗೆಯನ್ನು ತೆರವುಗೊಳಿಸಿ ಎಂದು ತಿಳಿಸಲಾಗುವುದೆಂದರು.

ಡಾ. ಬಸವರಾಜು ಸಿ. ರವರು ಮಾತನಾಡಿ, ಸಿಂಡಿಕೇಟ್ ಸಭೆಯ ಅನುಮೋದನೆ ಮೇರೆಗೆ ಅವಧಿ ಮುಗಿದಿರುವ ಮಳಿಗೆಗಳಿಗೆ ನೋಟಿಸ್ ನೀಡಿ ಎಂದು ಸಲಹೆ ನೀಡಿದರು. ಎಲ್ಲಾ ಸದಸ್ಯರು ಸರ್ವಾನುಮತದಿಂದ ಬೆಂಬಲಿಸಿದರು.

ಮಾನ್ಯ ಕುಲಪತಿಯವರು ಮಾತನಾಡಿ, ಅವಧಿ ಮುಗಿದಿರುವ ಮಳಿಗೆಗಳಿಗೆ ಒಂದು ವಾರದೊಳಗೆ ಮಳಿಗೆಗಳನ್ನು ತೆರವುಗೊಳಿಸುವಂತೆ ಅಂತಿಮ ಎಚ್ಚರಿಕೆ ನೋಟಿಸ್ ನೀಡಲಾಗುವುದು ಹಾಗೂ ಬಾಡಿಗೆಯನ್ನು ಸಕಾಲದಲ್ಲಿ ವಸೂಲಿ ಮಾಡಲು ಕ್ರಮವಹಿಸದೆ ಇರುವ ಅಧಿಕಾರಿ/ಸಿಬ್ಬಂದಿಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿದರು.

ಇ) ದಿನಾಂಕ 30-09-2023ಕ್ಕೆ ಅವಧಿ ಮುಗಿದಿದ್ದರೂ ಸಹ ಪೆಟ್ರೋಲ್ ಬಂಕ್‌ನವರು ತೆರವುಗೊಳಿಸಿಲ್ಲವೆಂದು ಸಭೆಯ ಗಮನಕ್ಕೆ ತಂದರು. ರೂ.10,000/-ಬಾಡಿಗೆಯಿದ್ದು 2023ರಿಂದ ಇದುವರೆಗೂ ಬಾಕಿ ಇರುವುದಾಗಿ ತಿಳಿಸಿದರು.

ಮಾನ್ಯ ಕುಲಪತಿಯವರು ಮಾತನಾಡಿ, ಬಾಡಿಗೆ ಬಾಕಿ ಇರುವುದನ್ನು ಪಾವತಿಸಲೇಬೇಕು, ತಕ್ಷಣವೇ ಕಾನೂನಿನ ಪ್ರಕಾರ ತೆರವುಗೊಳಿಸಲಾಗುವುದೆಂದು ತಿಳಿಸಿದರು.

ಈ) ಶ್ರೀ ಗೋಕುಲ್ ಗೋವರ್ಧನ್‌ರವರು ಮಾತನಾಡಿ, ಕಾರ್ಯಪಾಲಕ ಅಭಿಯಂತಯರರು, ವಿಶ್ವವಿದ್ಯಾನಿಲಯ ಇಂಜಿನಿಯರಿಂಗ್ ವಿಭಾಗ ಇವರು ನನಗೆ ನೀಡಿರುವ ಮಾಹಿತಿಯ ಪಟ್ಟಿಯನುಸಾರ ಶ್ರೀಮತಿ ಉಮಾದೇವಿ, ಬೆಂಗಳೂರು ಇವರಿಗೆ ರೂ.4,500/-ಗಳಿಗೆ ಬಾಡಿಗೆಯನ್ನು ನಿಗದಿಪಡಿಸಿದ್ದು, ಸದರಿಯವರ ಬಾಡಿಗೆ ಕರಾರಿನ ಅವಧಿಯು ದಿನಾಂಕ 14-7-2023ಕ್ಕೆ ಅಂತ್ಯಗೊಂಡಿರುತ್ತದೆ ಈ ಹಿನ್ನೆಲೆಯಲ್ಲಿ ಮುಂದಿನ ಕ್ರಮಕ್ಕಾಗಿ ಕುಲಸಚಿವರಿಗೆ ಪತ್ರ ಬರೆಯಲಾಗಿದೆ ಎಂದು ತಿಳಿಸಿರುತ್ತಾರೆ.

ಮಾನಸಗಂಗೋತ್ರಿಯ ರೌಂಡ್ ಕ್ಯಾಂಟೀನ್‌ನ್ನು ಬಾಡಿಗೆಗೆ ಪಡೆದಿರುವ ಗುತ್ತಿಗೆದಾರರು ರೂ.7,70,165/-ಗಳ ಬಾಡಿಗೆ ಬಾಕಿ ಉಳಿಸಿಕೊಂಡಿದ್ದರೂ ಸಹ ಯಾವುದೇ ಕ್ರಮ ಕೈಗೊಂಡಿರುವುದಿಲ್ಲವೆಂದು ತಿಳಿಸಿದರು.

ಕುಲಸಚಿವರು ಮಾತನಾಡಿ, ರೌಂಡ್ ಕ್ಯಾಂಟೀನ್‌ನ್ನು ಬಾಡಿಗೆಗೆ ಪಡೆದಿರುವ ಗುತ್ತಿಗೆದಾರರು ರೂ.4,00,000/-ಗಳನ್ನು ಮುಂಗಡವಾಗಿ ನೀಡಿದ್ದು, ಸದರಿ ಮೊತ್ತವನ್ನು ಈಗಾಗಲೇ ಮುಟ್ಟುಗೋಲು ಮಾಡಿಕೊಂಡು ಬಾಕಿ ಇರುವ ಮೊತ್ತದ ವಸೂಲಾತಿಗಾಗಿ ಈಗಾಗಲೇ ಕಾನೂನು ರೀತಿಯ ಕ್ರಮ ಕೈಗೊಳ್ಳಲಾಗಿದೆಯೆಂದು ತಿಳಿಸಿದರು.

ಶ್ರೀ ಮಹದೇಶುರವರು ಮಾತನಾಡಿ, ರೌಂಡ್ ಕ್ಯಾಂಟೀನ್‌ನ್ನು ಗುತ್ತಿಗೆ ಪಡೆದಿರುವ ಬಾಡಿಗೆದಾರರ ಬಾಕಿ ವಸೂಲಿ ಮಾಡುವ ಜವಾಬ್ದಾರಿ ವಿಶ್ವವಿದ್ಯಾನಿಲಯದ ಇಂಜಿನಿಯರಿಂಗ್ ವಿಭಾಗಕ್ಕೆ ಸೇರಿದ್ದಾಗಿರುತ್ತದೆಯೆಂದು ಆದರೆ ಸದರಿ ವಿಭಾಗದವರು ಜವಾಬ್ದಾರಿಯುತವಾಗಿ ಕೆಲಸವನ್ನು ನಿರ್ವಹಿಸದೆ ಇರುವುದರಿಂದ ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ ನಷ್ಟ ಉಂಟಾಗುತ್ತಿದೆಯೆಂದು ವಿಷಾದ ವ್ಯಕ್ತಪಡಿಸಿದರು.

ಶ್ರೀ ಗೋಕುಲ್ ಗೋವರ್ಧನ್‌ರವರು ಮಾತನಾಡಿ, ಬಾಡಿಗೆ ವಸೂಲಾತಿ ಮಾಡುತ್ತಿದ್ದೀರ ಎಂದು ಪ್ರಶ್ನಿಸಿದರೆ ಕರಾರು ಒಪ್ಪಂದ ನವೀಕರಣಗೊಂಡಿಲ್ಲದ ಕಾರಣ ಬಾಡಿಗೆ ವಸೂಲಾತಿ ಮಾಡಿಲ್ಲವೆಂದು ಕಾರ್ಯಪಾಲಕ ಅಭಿಯಂತರರು ಉತ್ತರಿಸಿರುತ್ತಾರೆ. ಎಸ್‌ಟಿಡಿ ಬೂತ್‌ಗಳ ಬಾಡಿಗೆದಾರರಿಗೆ ಸಂಬಂಧಿಸಿದಂತೆ ಕರಾರು ಒಪ್ಪಂದ ನವೀಕರಣಗೊಂಡಿಲ್ಲದ ಕಾರಣ ಸೂಕ್ತ ಕ್ರಮ ಕೈಗೊಳ್ಳಲು ಪತ್ರ ಬರೆಯಲಾಗಿದೆಯೆಂದು ಇಂಜಿನಿಯರಿಂಗ್ ವಿಭಾಗದವರು ತಿಳಿಸಿರುತ್ತಾರೆ. ಬಾಡಿಗೆ ವಸೂಲಾತಿಯಾದರೆ ಅಂದಾಜು ಒಂದೂವರೆ ಕೋಟಿ ರೂಪಾಯಿಗಳು ವಿಶ್ವವಿದ್ಯಾನಿಲಯಕ್ಕೆ ಸಂದಾಯವಾಗುತ್ತದೆ. ಇದರಿಂದ ವಿಶ್ವವಿದ್ಯಾನಿಲಯದ ಆರ್ಥಿಕ ಹೊರೆ ಕಡಿಮೆಯಾಗುತ್ತದೆಯೆಂದು ತಿಳಿಸಿದರು.

ಶ್ರೀ ಗೋಕುಲ್ ಗೋವರ್ಧನ್‌ರವರು ಮಾತನಾಡಿ ಸತೀಶ್‌ಕುಮಾರ್‌ರವರಿಗೆ ಸಂಬಂಧಿಸಿದಂತೆ 1.9.2019ರಿಂದ ವಿಶ್ವವಿದ್ಯಾನಿಲಯದ ಆದೇಶಾನುಸಾರ ಮುಂದಿನ ಟೆಂಡರ್ ಕೈಗೊಳ್ಳುವವರೆಗೂ ತಾತ್ಕಾಲಿಕವಾಗಿ ಹಂಚಿಕೆ ಮಾಡಲಾಗಿದೆ ಎಂದು ತಿಳಿಸಿರುತ್ತಾರೆ. ಆದರೆ 2019ರಿಂದ ಇಲ್ಲಿಯವರೆಗೂ ಟೆಂಡರ್ ಪ್ರಕ್ರಿಯೆ ನಿರ್ವಹಿಸದೆ ಇರುವುದಕ್ಕೆ ಕಾರಣವೇನು, ಈ ಎಲ್ಲಾ ಸೋರಿಕೆಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ವಿಶ್ವವಿದ್ಯಾನಿಲಯದ ವತಿಯಿಂದ ಬಾಡಿಗೆ ರೂಪದಲ್ಲಿ ನೀಡಿರುವ ಮಳಿಗೆ/ಕಟ್ಟಡಗಳ ಬಾಡಿಗೆಯನ್ನು ವಸೂಲು ಮಾಡುವುದರ ಸಂಬಂಧ ಒಬ್ಬ ಕಾರ್ಯನಿರ್ವಾಹಕರನ್ನು ನೇಮಿಸಿ ಪ್ರತಿ ತಿಂಗಳು ವಿಶ್ವವಿದ್ಯಾನಿಲಯಕ್ಕೆ ಸಂದಾಯವಾಗುವ ಬಾಡಿಗೆಯ ವಿವರಗಳನ್ನು ಸಿದ್ಧಪಡಿಸಬೇಕು, ಮೂರು ತಿಂಗಳಾದರೂ ಬಾಡಿಗೆ ಪಾವತಿ ಮಾಡದೆ ಇರುವ ಬಾಡಿಗೆದಾರರ ಬಗ್ಗೆ ಕಾರ್ಯಪಾಲಕ ಅಭಿಯಂತರರಿಗೆ ತಿಳಿಸಿ ತದನಂತರ ಮಾನ್ಯ ಕುಲಪತಿಯವರಿಗೆ ಹಾಗೂ ಕುಲಸಚಿವರಿಗೆ ಪತ್ರ ಬರೆದು ಈ ಕುರಿತು ಅಗತ್ಯ ಕ್ರಮಕೈಗೊಳ್ಳಲು ಸಹಾಯವಾಗುವುದೆಂದು ಸಲಹೆ ನೀಡಿದರು.

ವಿಶ್ವವಿದ್ಯಾನಿಲಯಕ್ಕೆ ಬಾಡಿಗೆ ರೂಪದಲ್ಲಿ ಸಂದಾಯವಾಗದೆ ಬಾಕಿ ಉಳಿದಿರುವ ಬಾಡಿಗೆ ಹಣವನ್ನು ವಸೂಲು ಮಾಡುವುದರ ಹಾಗೂ ಬಾಡಿಗೆಯನ್ನು ಪರಿಷ್ಕರಿಸುವುದರ ಸಂಬಂಧ ಅಗತ್ಯ ಕ್ರಮವಹಿಸಲಾಗುವುದೆಂದು ಕುಲಸಚಿವರು ಸಭೆಯ ಗಮನಕ್ಕೆ ತಂದರು.

ಉ) ಡಾ. ಸಿದ್ದರಾಜು ವಿ.ಜಿ., ಸಹ ಪ್ರಾಧ್ಯಾಪಕರು, ಸಾಮಾಜಿಕ ಒಳಗೊಳ್ಳುವಿಕೆ ಅಧ್ಯಯನ ಕೇಂದ್ರದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು ಯುಜಿಸಿ 10ನೇ ಯೋಜನೆಯಡಿ ಮಂಜೂರಾಗಿರುವ ಹುದ್ದೆಗೆ ಎದುರಾಗಿ ಆಯ್ಕೆ ಮಂಡಳಿ ಶಿಫಾರಸ್ಸಿನನ್ವಯ ಸಾಮಾಜಿಕ ಒಳಗೊಳ್ಳುವಿಕೆ ಅಧ್ಯಯನ ಕೇಂದ್ರಕ್ಕೆ ನೇಮಕಗೊಂಡಿದ್ದು ಸಂಶೋಧನಾ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಲು ಅನುವಾಗುವಂತೆ ಮಾರ್ಗದರ್ಶಕರ ಮಾನ್ಯತೆಯನ್ನು ನೀಡುವಂತೆ ಕೋರಿರುತ್ತಾರೆ. ತಮ್ಮ ಅಧ್ಯಯನ ಕೇಂದ್ರದಿಂದ ನ್ಯಾಕ್‌ಗಾಗಿ ಹಲವಾರು ಕೊಡುಗೆಗಳನ್ನು ನೀಡಿದ್ದು ಹಲವಾರು ವಿಚಾರಗೋಷ್ಠಿ/ವಿಚಾರ ಸಮ್ಮೇಳನಗಳನ್ನು ಆಯೋಜಿಸಿ ಹಲವು Journalಗಳನ್ನು ಹೊರತಂದಿರುವುದಾಗಿ ತಿಳಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಸದರಿಯವರಿಗೂ ಸಹ ಸಂಶೋಧನಾ ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರಾಗಿ ಕರ್ತವ್ಯ ನಿರ್ವಹಿಸಲು ಮಾರ್ಗದರ್ಶಕರ ಮಾನ್ಯತೆಯನ್ನು ನೀಡುವಂತೆ ಕೋರಿದರು.

ಮಾನ್ಯ ಕುಲಪತಿಯವರು ಮಾತನಾಡಿ, ಡಾ. ಸಿದ್ದರಾಜುರವರು ಖಾಯಂ ಅಧ್ಯಾಪಕರಲ್ಲ. ಯುಜಿಸಿ 10ನೇ ಯೋಜನೆಯಡಿಯಲ್ಲಿ ಮಂಜೂರಾದ ಯೋಜನೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಇಎಂಆರ್‌ಸಿ ಹಾಗೂ ಅಕಾಡೆಮಿಕ್ ಸ್ಟಾಫ್ ಕಾಲೇಜ್‌ನಲ್ಲಿ ಕರ್ತವ್ಯ ನಿರ್ವಹಿಸುತ್ತಿರುವವರು ಸಹ ಯುಜಿಸಿ ಯೋಜನೆಯಡಿಯಲ್ಲಿ ನಿಯೋಜಿತರಾಗಿದ್ದಾರೆ.

ಅವರನ್ನು ಸಹ ಮಾರ್ಗದರ್ಶಕರನ್ನಾಗಿ ನಿಯೋಜಿಸಲು ಸಾಧ್ಯವಾಗಿರುವುದರಿಲ್ಲವೆಂದು ತಿಳಿಸಿದರು.

ಶ್ರೀ ನಾಗರಾಜು ಸಿ ರವರು ಮಾತನಾಡಿ, ಪ್ರಾಯೋಜಿತ ಯುಜಿಸಿ ಯೋಜನೆಯಡಿ ಕಾರ್ಯನಿರ್ವಹಿಸುತ್ತಿರುವ ಡಾ.ಚಂದ್ರನಾಯಕ್ ಇವರಿಗೆ ಮಾರ್ಗದರ್ಶಕರಾಗಲು ಹಿಂದಿನ ಕುಲಪತಿಗಳು ಆದೇಶ ನೀಡಿದ್ದು, ಸದರಿ ಆದೇಶವನ್ನು ಹಿಂಪಡೆದುಕೊಳ್ಳುವಂತೆ ತಿಳಿಸಿದರು. ಸದರಿ ವಿಷಯಕ್ಕೆ ಡಾ. ಟಿ.ಆರ್.ಚಂದ್ರಶೇಖರ್ ಹಾಗೂ ಡಾ. ಬಸವರಾಜು ಸಿ ರವರು ತಮ್ಮ ಬೆಂಬಲ ವ್ಯಕ್ತಪಡಿಸಿದರು.

ಡಾ. ನಟರಾಜ್ ಹೆಚ್.ಎಸ್ ರವರು ಮಾತನಾಡಿ, ಡಾ. ಸಿದ್ದರಾಜು ವಿ.ಜಿ., ಇವರು ಸಂಶೋಧನಾ ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರಾಗಿ ಕಾರ್ಯನಿರ್ವಹಿಸಲು ಅರ್ಹತೆ ಹೊಂದಿರುವುದರಿಂದ ಹಾಗೂ ವಿಶ್ವವಿದ್ಯಾನಿಲಯದಲ್ಲಿ ಸಂಶೋಧನಾ ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರ ಕೊರತೆಯಿರುವುದರಿಂದ ಸದರಿಯವರಿಗೂ ಮಾರ್ಗದರ್ಶಕರ ಮಾನ್ಯತೆ ನೀಡುವಂತೆ ಮನವಿ ಮಾಡಿದರು.

ಮಾನ್ಯ ಕುಲಪತಿಯವರು ಮಾತನಾಡಿ, ಯುಜಿಸಿ ಯೋಜನೆಯಡಿ ಕರ್ತವ್ಯ ನಿರ್ವಹಿಸುತ್ತಿರುವ ಉದ್ಯೋಗಿಗಳಿಗೆ ವೇತನವು ಸಕಾಲದಲ್ಲಿ ಲಭ್ಯವಾಗುವುದಿಲ್ಲ, ಯುಜಿಸಿ ಧನಸಹಾಯ ಆಯೋಗವು ವೇತನ ಅನುದಾನವನ್ನು ಬಿಡಗಡೆಗೊಳಿಸಿದಲ್ಲಿ ಮಾತ್ರ ಸದರಿಯವರುಗಳಿಗೆ ವೇತನವನ್ನು ಪಾವತಿಸಲು ಕ್ರಮವಹಿಸಲಾಗುತ್ತದೆ. ಈ ಹಿನ್ನೆಲೆಯಲ್ಲಿ ಸದರಿಯವರುಗಳು ಬೇರೆಡೆ ಖಾಯಂ ಉದ್ಯೋಗ ದೊರಕಿದ ಸಂದರ್ಭದಲ್ಲಿ ಅವರು ಬೇರೆಡೆ ತೆರಳುತ್ತಾರೆ. ಆದುದರಿಂದ ಖಾಯಂ ಅಧ್ಯಾಪಕರನ್ನು ಹೊರತುಪಡಿಸಿ ಯೋಜನೆಯಡಿ ಕಾರ್ಯನಿರ್ವಹಿಸುತ್ತಿರುವ ಉದ್ಯೋಗಿಳಿಗೆ ಮಾರ್ಗದರ್ಶಕರ ಮಾನ್ಯತೆ ನೀಡಲು ಸಾಧ್ಯವಿಲ್ಲವೆಂದು ಹಾಗೂ ಮೇಲಾಗಿ ಯುಜಿಸಿ ನಿಯಮಾವಳಿಗೆ ವಿರುದ್ಧವಾಗುತ್ತದೆಯೆಂದು ತಿಳಿಸಿದರು.

ಮುಂದುವರೆದು, ಈಗಾಗಲೇ ಡಾ. ಚಂದ್ರನಾಯಕ್‌ರವರ ಮಾರ್ಗದರ್ಶನದಡಿಯಲ್ಲಿರುವ ಸಂಶೋಧನಾ ವಿದ್ಯಾರ್ಥಿಗಳು ಸಂಶೋಧನೆಯನ್ನು ಕೈಗೊಂಡಿದ್ದು ಪ್ರಸ್ತುತ ಸಂದರ್ಭದಲ್ಲಿ ಸಂಶೋಧನಾ ಮಾರ್ಗದರ್ಶಕರಾಗಿ ಕಾರ್ಯನಿರ್ವಹಿಸಲು ನೀಡಿರುವ ಆದೇಶವನ್ನು ಹಿಂಪಡೆದಲ್ಲಿ ಸದರಿಯವರ ಮಾರ್ಗದರ್ಶನದಲ್ಲಿ ಸಂಶೋಧಕರಾಗಿ ಕಾರ್ಯನಿರ್ವಹಿಸುತ್ತಿರುವ ವಿದ್ಯಾರ್ಥಿಗಳಿಗೆ ತೊಂದರೆಯುಂಟಾಗುತ್ತದೆ. ಈ ಹಿನ್ನೆಲೆಯಲ್ಲಿ ಯಾವುದೇ ಹೊಸ ವಿದ್ಯಾರ್ಥಿಗಳಿಗೆ ಸಂಶೋಧನಾ ಮಾರ್ಗದರ್ಶಕರಾಗಿ ಮುಂದುವರೆಯಲು ಅನುಮತಿ ನೀಡಿರುವುದಿಲ್ಲ ಪ್ರಸ್ತುತ ಸದರಿಯವರ ಮಾರ್ಗದರ್ಶನದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂಶೋಧನಾ ವಿದ್ಯಾರ್ಥಿಗಳ ಸಂಶೋಧನೆಯು ಮುಕ್ತಾಯ ಹಂತದಲ್ಲಿದೆ ಎಂದು ಸಭೆಯ ಗಮನಕ್ಕೆ ತಂದರು.

ಊ) ವಿಶ್ವವಿದ್ಯಾನಿಲಯದ ಹಲವು ಸಭಾಂಗಣಗಳಿಗೆ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸುವಂತೆ ತಿಳಿಸಿದರು.

ಮಾನ್ಯ ಕುಲಪತಿಯವರು ಮಾತನಾಡಿ, ಪ್ರಸುತ ಈ ಸಾಲಿನ ಆರ್ಥಿಕ ವರ್ಷದಲ್ಲಿ ಬಹದ್ದೂರ್ ಇನ್ಸ್‌ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸೈನ್ಸ್ ವಿಭಾಗದಲ್ಲಿರುವ ಸಭಾಂಗಣವನ್ನು ಆದ್ಯತೆ ಮೇರೆಗೆ ಎಲ್ಲಾ ರೀತಿಯ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಕ್ರಮವಹಿಸಲಾಗುತ್ತಿದ್ದು ಈ ರೀತಿ ಹಂತಹಂತವಾಗಿ ವಿಶ್ವವಿದ್ಯಾನಿಲಯದಲ್ಲಿನ ಎಲ್ಲಾ ಸಭಾಂಗಣಗಳ ರಿಪೇರಿ ಕಾರ್ಯ/ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಕ್ರಮವಹಿಸಲಾಗುವುದೆಂದು ತಿಳಿಸಿದರು.

ಶ್ರೀ ಮಹದೇಶುರವರು ಮಾತನಾಡಿ, ಕೆಲವು ಸಭಾಂಗಣಗಳನ್ನು ವಿಶ್ವವಿದ್ಯಾನಿಲಯವು ಕಾರ್ಯಕ್ರಮ ನಡೆಸಲು ಕೆಲವು ಸಂಘಟನೆ/ಸಂಸ್ಥೆಗಳಿಗೆ ಉಚಿತವಾಗಿ ನೀಡುತ್ತಿದೆ ಅದರ ಬದಲಾಗಿ ಕನಿಷ್ಟ ದರವನ್ನು ನಿಗದಿಪಡಿಸಿ ಎಂದು ಸಲಹೆ ನೀಡಿದರು.

ಮಾನ್ಯ ಕುಲಪತಿಯವರು ಮಾತನಾಡಿ, ವಿದ್ಯಾರ್ಥಿಗಳಿಗೆ, ಸಂಘಟನೆ ಹಾಗೂ ಸಂಸ್ಥೆಗಳಿಗೆ ಸಭಾಂಗಣವನ್ನು ಉಚಿತವಾಗಿ ನೀಡುವ ಬದಲು ರೂ.5,000/-ಗಳನ್ನು ನಿರ್ವಹಣಾ ವೆಚ್ಚವೆಂದು ನಿಗದಿಗೊಳಿಸಲಾಗುವುದೆಂದು ತಿಳಿಸಿದರು. ಈ ಸಂಬಂಧ ಎಲ್ಲಾ ಸಿಂಡಿಕೇಟ್ ಸದಸ್ಯರು ಮಾನ್ಯ ಕುಲಪತಿಗಳ ಸಲಹೆಗೆ ದನಿಗೂಡಿಸಿದರು.

**ತೀರ್ಮಾನ: ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ/ವಿದ್ಯಾರ್ಥಿಗಳ ಸಂಘಟನೆ/ಯಾವುದೇ ಸಂಸ್ಥೆಗಳಿಗೆ ಸಭಾಂಗಣವನ್ನು/ಜಾಗವನ್ನು ಉಚಿತವಾಗಿ ನೀಡುವುದರ ಬದಲಾಗಿ ಒಂದು ದಿನದ ಕಾರ್ಯಕ್ರಮಕ್ಕೆ ಜಿಎಸ್‌ಟಿಯನ್ನೊಳಗೊಂಡಂತೆ ಕನಿಷ್ಠ ರೂ.5,000/-ಗಳ ನಿರ್ವಹಣಾ ವೆಚ್ಚವನ್ನು ನಿಗದಿಪಡಿಸಲು ತೀರ್ಮಾನಿಸಲಾಯಿತು.**

5. ಡಾ. ಮಹೇಶ್ ಟಿ.ಬಿ. ರವರು ಮಾತನಾಡಿ, 10 ವರ್ಷಗಳು ಕಳೆದರೂ ಬಿ.ಎಡ್ ಪಠ್ಯಕ್ರಮಗಳು ಪುನರವಲೋಕನಗೊಂಡಿಲ್ಲ (review) ಎಂದು ತಿಳಿಸಿದರು. ಮುಂದುವರೆದು ತ್ವರಿತವಾಗಿ ಘಟಿಕೋತ್ಸವ ಪದವಿ ಪ್ರಮಾಣಪತ್ರಗಳನ್ನು ವಿದ್ಯಾರ್ಥಿಗಳಿಗೆ ನೀಡುವಂತೆ ಕೋರಿದರು. ಕುಲಸಚಿವರು (ಪರೀಕ್ಷಾಂಗ)ರವರು ಮಾತನಾಡಿ, ಪದವಿ ಪ್ರಮಾಣಪತ್ರಗಳನ್ನು NAD ನಿಂದ ಪಡೆದುಕೊಳ್ಳಲು ತಿಳಿಸಿದರು.

6. ಶ್ರೀ ಮಹದೇಶುರವರು ಮಾತನಾಡಿ, ಅತಿಥಿ ಉಪನ್ಯಾಸಕರ ವೇತನ ಪರಿಷ್ಕರಣೆಯ ಬಗ್ಗೆ ವಿವರಣೆಯನ್ನು ಕೋರಿದರು.

ಮಾನ್ಯ ಕುಲಪತಿಯವರು ಮಾತನಾಡಿ, ಅತಿಥಿ ಉಪನ್ಯಾಸಕರ ವೇತನ ಪರಿಷ್ಕರಣೆಯ ಸಂಬಂಧ ಸಮಿತಿಯವರು ನೀಡಿರುವ ವರದಿಯನ್ನು ತಾವು ಈಗಾಗಲೇ ಪರಿಶೀಲಿಸಿದ್ದು, ಸಮಿತಿಯವರು ಶೇಕಡ 22 ರಷ್ಟು ವೇತನ ಪರಿಷ್ಕರಿಸಬೇಕೆಂದು ಶಿಫಾರಸ್ಸು ಮಾಡಿರುತ್ತಾರೆ. ಆದರೆ ಹಣಕಾಸು ಅಧಿಕಾರಿಗಳೊಂದಿಗೆ ಚರ್ಚಿಸಿ ತಿಂಗಳಿಗೆ ಎಷ್ಟು ವೆಚ್ಚವಾಗಬಹುದೆಂದು ಪರಾಮರ್ಶಿಸಿ ಸಮಿತಿಯು ನಿರ್ಣಯಿಸಬೇಕಿತ್ತು. ಏಕೆಂದರೆ ಪ್ರಸ್ತುತವಿರುವ ವಿಶ್ವವಿದ್ಯಾನಿಲಯದ ಆರ್ಥಿಕ ಪರಿಸ್ಥಿತಿಯಲ್ಲಿ ನಿವೃತ್ತಿ ಹೊಂದಿರುವ ಉದ್ಯೋಗಿಗಳಿಗೆ ಗ್ರಾಚ್ಯುಯಿಟಿ ಮತ್ತು ಪಿಂಚಣಿಯನ್ನು ಪಾವತಿಸಲು ಅನುದಾನದ ಕೊರತೆ ಇರುತ್ತದೆ ಎಂದು ತಿಳಿಸಿದರು.

ಡಾ. ಟಿ.ಆರ್.ಚಂದ್ರಶೇಖರ್‌ರವರು ಮಾತನಾಡಿ, ಕೆಲವು ಅನಾವಶ್ಯಕ ಖರ್ಚುಗಳನ್ನು ಕಡಿಮೆ ಮಾಡಿದಲ್ಲಿ ಆರ್ಥಿಕ ಹೊರೆಯನ್ನು ಕಡಿಮೆ ಮಾಡಬಹುದಾಗಿದೆ ಎಂದು ತಿಳಿಸಿದರು.

ಶ್ರೀ ಗೋಕುಲ್ ಗೋವರ್ಧನ್‌ರವರು ಮಾತನಾಡಿ, 2024-25ನೇ ಸಾಲಿನ ಆಯವ್ಯಯ ಅಂದಾಜುಗಳಲ್ಲಿ ತಾತ್ಕಾಲಿಕ ಅಧ್ಯಾಪಕರ ವೇತನಕ್ಕಾಗಿ ರೂ. 18 ಕೋಟಿಗಳನ್ನು ಮೀಸಲಿರಿಸಲಾಗಿದೆ.

ಮಾನ್ಯ ಕುಲಪತಿಯವರು ಮಾತನಾಡಿ, ಒಂದೊಂದು ವಿಶ್ವವಿದ್ಯಾನಿಲಯದಲ್ಲಿ ಒಂದೊಂದು ರೀತಿಯ ವೇತನವನ್ನು ನಿಗದಿಪಡಿಸಲಾಗಿದೆ ಇದನ್ನು ಮನಗಂಡ ಉನ್ನತ ಶಿಕ್ಷಣ ಇಲಾಖೆಯು ಒಂದು ಸಮಿತಿಯನ್ನು ರಚಿಸಿ ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲಿಯೂ ಏಕರೂಪ ಶುಲ್ಕ ಹಾಗೂ ವೇತನವನ್ನು ನಿಗದಿಪಡಿಸುವ ಬಗ್ಗೆ ಕ್ರಮ ವಹಿಸುತ್ತಿದ್ದಾರೆ. ಆದ್ದರಿಂದ ವೇತನ ಪರಿಷ್ಕರಣೆ ಮಾಡಿದರೆ ವಿಶ್ವವಿದ್ಯಾನಿಲಯದಲ್ಲಿರುವ ಅನುದಾನ ಎಷ್ಟು ಹಾಗೂ ಎಷ್ಟು ವೆಚ್ಚ ಮಾಡಬಹುದೆಂದು ಲೆಕ್ಕಚಾರವನ್ನು ಮಾಡಬೇಕಾಗುತ್ತದೆ ಎಂದು ತಿಳಿಸಿದರು.

7. ಡಾ. ನಟರಾಜ್ ಹೆಚ್ ಎಸ್ ರವರು ಮಾತನಾಡಿ, ಮಹಾರಾಜ ಕಾಲೇಜಿನ ಮೂಲಭೂತ ಸೌಕರ್ಯಗಳು ಹಾಳಾಗಿದ್ದು, ಸಫಾಯಿ ಕರ್ಮಚಾರಿಯವರು ವಯೋನಿವೃತ್ತಿ

ಹೊಂದಿರುವುದರಿಂದ ಅವರ ಬದಲು ಬೇರೆಯವರನ್ನು ನಿಯೋಜಿಸಿರುವುದಿಲ್ಲವೆಂದು ಶೌಚಾಲಯದ ನಿರ್ಮಲೀಕರಣವಾಗುತ್ತಿಲ್ಲವೆಂದು ತಿಳಿಸಿದರು.

ಮಾನ್ಯ ಕುಲಪತಿಯವರು ಮಾತನಾಡಿ, ಮಹಾರಾಜ ಕಾಲೇಜಿನ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಕ್ರಮವಹಿಸಲಾಗುವುದೆಂದು ತಿಳಿಸಿದರು.

ಶ್ರೀ ಗೋಕುಲ್ ಗೋವರ್ಧನ್‌ರವರು ಮಾತನಾಡಿ, ಕೆಲವು ವಿದ್ಯಾರ್ಥಿನಿಲಯಗಳು ಶಿಥಿಲಾವಸ್ಥೆಯಲ್ಲಿದೆ ಎಂದು ತಿಳಿಸಿದರು. ವಿದ್ಯಾರ್ಥಿನಿಲಯಗಳ ಕುರಿತು ತಾವು ಈಗಾಗಲೇ ವಿದ್ಯಾರ್ಥಿನಿಲಯಗಳ ಪ್ರವೇಶಾತಿ ಸಂಬಂಧ ಸಮಿತಿಯಲ್ಲಿ ವಿವರಿಸಲಾಗಿದೆಯೆಂದು ತಿಳಿಸಿದರು.

ಮಾನ್ಯ ಕುಲಪತಿಯವರು ಮಾತನಾಡಿ, ಶಿಥಿಲಾವಸ್ಥೆಯಲ್ಲಿರುವ ಸರಸ್ವತಿಪುರಂನಲ್ಲಿರುವ ವಿದ್ಯಾರ್ಥಿನಿಲಯ, ಮಹಾರಾಜ ಕಾಲೇಜು ವಿದ್ಯಾರ್ಥಿನಿಲಯಗಳನ್ನು ದೀನ್ ದಯಾಳು ಉಪಾಧ್ಯಾಯ ಸೌಹಾರ್ದ ವಿದ್ಯಾರ್ಥಿನಿಲಯ ಸಂಕೀರ್ಣಕ್ಕೆ ವರ್ಗಾಯಿಸಲು ಕ್ರಮವಹಿಸಲಾಗುವುದೆಂದು ತಿಳಿಸಿದರು.

ಶ್ರೀ ಮಹದೇಶುರವರು ಮಾತನಾಡಿ, ಮದನ್ ಮೋಹನ್ ಮಾಳವೀಯ ಕೇಂದ್ರದಲ್ಲಿರುವ ಖಾಲಿ ಜಾಗದಲ್ಲಿ ಮಳಿಗೆಯನ್ನು ನಿರ್ಮಿಸಿ ಬಾಡಿಗೆ ನೀಡಿದಲ್ಲಿ ವಿಶ್ವವಿದ್ಯಾನಿಲಯಕ್ಕೆ ಆರ್ಥಿಕವಾಗಿ ಅನುಕೂಲವಾಗುತ್ತದೆಯೆಂದು ತಿಳಿಸಿದರು.

ಶ್ರೀ ಗೋಕುಲ್ ಗೋವರ್ಧನ್‌ರವರು ಮಾತನಾಡಿ, ಮಹಿಳಾ ವಿದ್ಯಾರ್ಥಿನಿಲಯಗಳು ಇರುವುದರಿಂದ ಕೆಲವು ವ್ಯಾಪಾರಸ್ಥರಿಗೆ ಮಾತ್ರ ಸೀಮಿತಗೊಳಿಸಿ ಎಂದು ತಿಳಿಸಿದರು.

೮. ಶ್ರೀ ನಾಗರಾಜು ಸಿ ರವರು ಮಾತನಾಡಿ, ಆನ್‌ಲೈನ್ ಪ್ರೋಗ್ರಾಂಗೆ ಸಂಬಂಧಿಸಿದಂತೆ ವಿಶ್ವವಿದ್ಯಾನಿಲಯವು ಮಾಡಿಕೊಂಡಿರುವ ಒಡಂಬಡಿಕೆಯ ಮಾಹಿತಿಯನ್ನು ನೀಡಿ ಎಂದು ಈಗಾಗಲೇ ತಾವು ಪತ್ರ ಬರೆದಿರುವುದಾಗಿ ತಿಳಿಸಿದರು.

೯. ಶ್ರೀ ಮಹದೇಶುರವರು ಮಾತನಾಡಿ ಯುವರಾಜ ಕಾಲೇಜಿನ ಅಧ್ಯಾಪಕರು/ಅಧ್ಯಾಪಕೇತರರು ಹಾಜರಾತಿಯನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಕ್ರಮಕೈಗೊಳ್ಳಿ ಎಂದು ತಿಳಿಸಿದರು.

ಅಂತಿಮವಾಗಿ ಮಾನ್ಯ ಕುಲಸಚಿವರು ಸಭೆಯ ಅಧ್ಯಕ್ಷತೆ ವಹಿಸಿದ್ದ ಮಾನ್ಯ ಕುಲಪತಿಗಳಿಗೆ ಹಾಗೂ ಮುಕ್ತವಾಗಿ ಚರ್ಚಿಸಿ ಸೂಕ್ತ ಸಲಹೆ/ಸೂಚನೆಗಳನ್ನು ನೀಡಿದ ಎಲ್ಲಾ ಸಿಂಡಿಕೇಟ್ ಸದಸ್ಯರುಗಳಿಗೆ ವಂದನೆಗಳನ್ನರ್ಪಿಸುವ ಮೂಲಕ ಸಭೆಯು ಮುಕ್ತಾಯವಾಯಿತು.

**ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿ** **ಕುಲಪತಿಗಳು ಹಾಗೂ ಅಧ್ಯಕ್ಷರು**